## 39

# ಮನ್ನಣೆಯಿಂದ ನಿಂದನೆಗೆ

## (14:6-20)

ನನ್ನ ಸ್ನೇಹಿತನಾದ ಒಬ್ಬ ಪ್ರಸಂಗಿಯು ಅವನು ಪ್ರಸಂಗಿಸಿದ ಸ್ಥಳದಲ್ಲಿ ಅವನಿಗೆ ಉಂಟಾದ ಪ್ರತಿಕ್ರಿಯೆಗಳ ಬಗ್ಗೆ ವಿವರಿಸಿ, ಈ ರೀತಿಯಾಗಿ ಹೇಳಿದನು: "ಮೊದಲ ವರ್ಷ ಅವರು ನನನ್ನು ಕೊಂಡಾಡಿದರೆ ಎರಡನೇ ವರ್ಷ ಅವರು ನನ್ನನ್ನು ನಿರಾಶೆಗೊಳಿಸಿದರು. ಮೂರನೇ ವರ್ಷ ಅವರು ನನನ್ನು ಪೂರ್ಣ ಪುಡಿಮಾಡಿದರು." ಅವರು ಕೆಲವು ವರ್ಷಗಳಲ್ಲಿ ಒಂದು ತೀವ್ರತೆಯಿಂದ ಇನ್ನೊಂದು ತೀವ್ರತೆಗೆ ಹೋದನು, ಆದರೆ ಅಪೊಸ್ತಲನಾದ ಪೌಲನು ಕೆಲವೇ ತಾಸುಗಳಲ್ಲಿ ಉನ್ನತ ಸ್ಥಾನದಿಂದ ಪುಡಿ ಪುಡಿಯಾಗುವ ಪರಿಸ್ಥಿತಿಗೆ ಇಳಿದು ಹೋದನು!

ಅಪೊಸ್ತಲರ ಕೃತ್ಯದಲ್ಲಿನ 14ನೇ ಅಧ್ಯಾಯದಲ್ಲಿ, ಪೌಲನ ಪ್ರಥಮ ಸೇವಾ ಪ್ರಯಾಣದ ನಡುವೆ ನಾವಿದ್ದೇವೆ, ಇಲ್ಲಿ ಪೌಲ ಬಾರ್ನಬರು ಗಲಾತ್ಯ ಪ್ರದೇಶದಲ್ಲಿ ಸುವಾರ್ತಾ ಸೇವೆಯಲ್ಲಿ ತೊಡಗಿದ್ದರು. 13:42-14:7ರ, ನಮ್ಮ ಹಿಂದಿನ ಅಧ್ಯಾಯನದ ಅಂತಿಮದಲ್ಲಿ ಯೆಹೂದ್ಯರು ಮತ್ತು ಸಾರ್ವಜನಿಕ ಅಧಿಕಾರಿಗಳು, ಇಕೋನ್ಯದಲ್ಲಿ ಪೌಲ ಬಾರ್ನಬರನ್ನು ಕಲ್ಲೆಸೆದು ಕೊಲ್ಲಲು ನಿರ್ಣಯಿಸಿದ್ದರು. ಸೇವಕರುಗಳು ಆ ಆಲೋಚನೆಯನ್ನು ಅರಿತಾಗ, "ಅವರು ಓಡಿ ಹೋಗಿ ಲುಕವೋನ್ಯದಲ್ಲಿದ್ದ ಲುಸ್ತ್ರ ದೆರ್ಬೆ ಎಂಬ ಊರುಗಳಿಗೂ ಅವುಗಳಿಗೆ ಸೇರಿರುವ ಸೀಮೆಗೂ ಹೋಗಿ ಅಲ್ಲಿ ಸುವಾರ್ತೆಯನ್ನು ಸಾರಿದರು" (ವಚನ 6). ಗಲಾತ್ಯವು, ಪಂಪುಲ್ಯ, ಪಿಸಿದ್ಯ, ಮತ್ತು ಲುಕೆನಿಯಾ ಎಂಬ ಮೂರು ಪ್ರದೇಶಗಳನ್ನು ಹೊಂದಿತ್ತು; ಈಗ ಅವರು ದಕ್ಷಿಣದ ಲುಕವೋನ್ಯಕ್ಕೆ ತೆರಳಿದರು.[1] ಆ ಪ್ರದೇಶದ ಒರಟಾದ ಅನುವಾದವೇನೆಂದರೆ, "ತೋಳಗಳ ದೇಶ" ಅ ಇಬ್ಬರು ಸೇವಕರುಗಳು, ಅನಾಗರೀಕತೆ ಇದ್ದ ಸ್ಥಳಕ್ಕೆ ಮುಂದಾಗಿ ಹೋದರು.

ಪೌಲ ಬಾರ್ನಬರು ಪ್ರಥಮವಾಗಿ ಲುಸ್ತ್ರಕ್ಕೆ ಬಂದರು,[2] ಅದು ಇಕೋನ್ಯಕ್ಕೆ 18ರಿಂದ 20 ಮೈಲುಗಳ ದಕ್ಷಿಣ ಭಾಗದಲ್ಲಿತ್ತು. ಲುಸ್ತ್ರವು ಪ್ರಸಿದ್ಧಿಗೊಳ್ಳದ ಹಳ್ಳಿಯಾಗಿತ್ತು ಮತ್ತು ಸ್ಥಳೀಯ ಬುಡಕಟ್ಟು ಜನರನ್ನು *ಹಿಮ್ಮೆಟ್ಟಿಸುವದಕ್ಕಾಗಿ* ನೇಮಕಗೊಂಡ ಒಂದು ಅಯ್ದ ಸಮುದಾಯವಾಗಿತ್ತು.

ಪೌಲನ ವಿಸ್ತಾರವಾದ ಸೇವೆಯಲ್ಲಿ ಲುಸ್ತ್ರದ ಅನುಭವವು ಕಷ್ಟಕರವಾಗಿತ್ತು. ಪೌಲನು ತಿಮೊಥಿಗೆ ಬರೆಯುವಾಗ (ಅವನು ಲುಸ್ತ್ರದವನಾಗಿದ್ದನು[3]), "ಅಂತಿಯೋಕ್ಯ ಇಕೋನ್ಯ ಲುಸ್ತ್ರ ಎಂಬ ಪಟ್ಟಣಗಳಲ್ಲಿ ನನಗೆ ಸಂಭವಿಸಿದ ಹಿಂಸೆಗಳನ್ನೂ ಕಷ್ಟಾನುಭವಗಳನ್ನೂ ತಿಳಿದವನಾಗಿದ್ದೀ" (2 ತಿಮೊಥೆ 3:11). ಕೊರಿಂಥವರಿಗೆ ಬರೆಯುವಾಗ, ಒಂದು ಸಾರಿ ಅವನಿಗೆ ಕಲ್ಲೆಸೆದಿದ್ದರು ಎಂದು ತಿಳಿಸಿರುವನು (2 ಕೊರಿಂಥ 11:23-26); ಅದು ಲುಸ್ತ್ರದಲ್ಲಿ ಮಾತ್ರ ಉಂಟಾಗಿತ್ತು. ನಂತರ ಪೌಲನು ಗಲಾತ್ಯದ ಸಹೋದರರಿಗೆ ಬರೆದು, "... ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ" ಎಂದು ಹೇಳಿರುವನು (ಗಲಾತ್ಯ 6:17). ಆ ಮುದ್ರೆಗಳಲ್ಲಿ ಲುಸ್ತ್ರದಲ್ಲಿ ಕಲ್ಲುಗಳಿಂದಾದ ಗುರುತುಗಳನ್ನು ಸಹ ಹೊಂದಿದ್ದನು.

ಈ ಪಾಠದಲ್ಲಿ, ಪೌಲನು ಉನ್ನತ ಸ್ಥಾನದಿಂದ, ಪುಡಿ ಪುಡಿಯಾದ ಪರಿಸ್ಥಿತಿಗೆ ಹೋದ ವಿಚಾರವನ್ನು ನೋಡುತ್ತೇವೆ ಮತ್ತು ಅದನ್ನು ಅವನು ಹೇಗೆ ಎದುರಿಸಿದನು ಎಂದು ಸಹ ನೋಡುತ್ತೇವೆ. ಇದನ್ನು ಸಿದ್ಧಪಡಿಸುವಾಗ ಈ ವಿಷಯವನ್ನು ನಮ್ಮ ಸನ್ನಿವೇಶಗಳಿಗೆ ಹೇಗೆ

ಅಳವಡಿಸಬೇಕು ಎಂದು ಪ್ರಯಾಸಪಟ್ಟನು ಯಾಕಂದರೆ, ನಮ್ಮಲ್ಲಿ ಕೆಲವರಿಗೆ ಲುಸ್ತ್ರದಲ್ಲಿ ಪೌಲನಿಗೆ ಉಂಟಾದ ಅನುಭವದಂಥ ಅನುಭವಗಳೇ ಉಂಟಾಗಿರುತ್ತವೆ. ಅನೇಕ ಹೋಲಿಕೆಗಳು ನನ್ನ ಮನಸ್ಸಿಗೆ ಬಂದವು: ಜಯ ಮತ್ತು ಸೋಲು, ಯಶಸ್ವಿ ಹಾಗೂ ಘಾಸಿ, ತಿರಸ್ಕಾರ ಹಾಗೂ ಪುರಸ್ಕಾರ ಅಂತಿಮವಾಗಿ ನಾನು "ಮನ್ನಣೆ" ಹಾಗೂ "ನಿಂದನೆ" - ಎಂಬುದನ್ನು ನಿರ್ಣಯಿಸಿದೆನು. ಒಂದು ವೇಳೆ ಪರಿಪೂರ್ಣವಾದ ಹೋಲಿಕೆ ಇಲ್ಲದೆ ಇರಬಹುದು, ನಮ್ಮ ಜೀವಿತದಲ್ಲಿ ಉಂಟಾಗುವ ತೀರ್ವವಾದ ವಿಷಯಗಳಿಗೆ, ಸಾಕಷ್ಟು ಹೋಲಿಕೆಯನ್ನು ಮಾಡಿಕೊಳ್ಳಬಹುದು.

## ಸಾಧನೆ (14:6, 7)

ಸುವಾರ್ತೆಯನ್ನು ಸಾರಲು, ಪೌಲ ಬಾರ್ನಬರು ಅಂತಿಯೋಕ್ಯದಿಂದ ಹೊರಟು ಹೋಗಿದ್ದರು, ಇಕೋನ್ಯದಿಂದಲೂ ತಪ್ಪಿಸಿಕೊಂಡಿದ್ದರು. ಈ ಸಂಗತಿಗಳು, ಅವರನ್ನು ದೇವರ ಉದ್ದೇಶವನ್ನು ಬಿಟ್ಟುಬಿಡುವಂತೆ ಮಾಡಲಿಲ್ಲ. ಅವರು ಲುಸ್ತ್ರವನ್ನು ಸಮೀಪಿಸಿದಾಗ (ವಚನ 6), "ಅಲ್ಲಿ ಸುವಾರ್ತ ಪ್ರಸಾರಣವನ್ನು ಮುಂದುವರಿಸಿದರು" (ವಚನ 7).

ಲುಸ್ತ್ರದಲ್ಲಿ ಸಭಾ ಮಂದಿರವಿತ್ತು ಎಂದು ನಾವು ಓದುವದಿಲ್ಲ. ಕೆಲವೇ ಯೆಹೂದ್ಯರು ಅಲ್ಲಿ ವಾಸಿಸಿದ್ದರು (16:1; 2 ತಿಮೊಥೆ 1:5), ಆದರೆ ಸಭಾ ಮಂದಿರ ಸ್ಥಾಪಿಸುವಷ್ಟು ಯೆಹೂದ್ಯರು ಅಲ್ಲಿ ಇರಲಿಲ್ಲ.[4] ಪೌಲ ಬಾರ್ನಬರು, ಮೊದಲನೆಯದಾಗಿ ಸಭಾಮಂದಿರವನ್ನು ಸಂಧಿಸಲು ಸಾಧ್ಯವಾಗದೆ ಇರುವಾಗ (ಅದು ಅವರ ಪದ್ಧತಿಯಾಗಿತ್ತು), ಅವರು ಬಹಿರಂಗವಾಗಿ ಸುವಾರ್ತೆ ಸಾರಿದರು. ಬಹುಶಃ ಪಟ್ಟಣದಲ್ಲಿದ್ದ ವಿಶಾಲ ಸ್ಥಳವಾಗಿರಬಹುದು (ಅನೇಕ ಪಟ್ಟಣಗಳಲ್ಲಿ ಇಷ್ಟು ವಿಸ್ತಾರವಾದ ಸ್ಥಳಗಳಿರುವದು ಸಂದೇಹ).

ಈ ಇಬ್ಬರು ಯೇಸುವನ್ನು ಸಾರುವಾಗ, ದೇವರು ಅವರ ಪ್ರಯತ್ನವನ್ನು ಆಶೀರ್ವದಿಸಿದನು. ನಂತರ ನಾವು ಲುಸ್ತ್ರದ "ಶಿಷ್ಯರು" ಎಂದು ಓದುತ್ತೇವೆ (14:20) - ಇನ್ನೂ ನಂತರದಲ್ಲಿ ಕರ್ತನ ಸಭೆಯ ಸ್ಥಾಪನೆಯಾಯಿತು ಎಂದು ನೋಡುತ್ತೇವೆ (14:21, 23).

ಲುಸ್ತ್ರದವರು, ಮಾಡಲು ಪೌಲ ಬಾರ್ನಬರನ್ನು ಸನ್ಮಾನಿಸಿದರೂ, ನಂತರ ಅವರಿಂದ ಉಂಟಾದ ಹಿಂಸೆಯ ಬಗ್ಗೆ ಸಂಕ್ಷಿಪ್ತವಾಗಿ ನೋಡೋಣ. ಈ ವಿಷಯಗಳನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು: ಪ್ರಪಂಚವು ಮನುಷ್ಯನನ್ನು ಯಾವ ರೀತಿಯಾದರೂ ತೀರ್ಪುಮಾಡಬಹುದು, ಆದರೆ ಅವನು ದೇವರ ಉದ್ದೇಶವನ್ನು ಈಡೇರಿಸುವಾಗ, ಅವನು ಯಶಸ್ವಿಯಾಗುವನು! ಇನ್ನೊಂದು ವಿಧದಲ್ಲಿ, ಪ್ರಪಂಚವು ಅವನನ್ನು ಸನ್ಮಾನಿಸಿದರೂ, ಒಂದು ವೇಳೆ ಅವನ ಹೃದಯವು ದೇವರ ಕೇಂದ್ರಸ್ಥಾನವಾಗಿರದಿದ್ದರೆ, ಅವನು ಸೋತವನೇ. ಸಂಕಷ್ಟದ ಸನ್ನಿವೇಶದಲ್ಲೂ ಪೌಲ ಬಾರ್ನಬರು ದೇವರು ತಮಗೆ ನೀಡಿದ ಉದ್ದೇಶವನ್ನು ಈಡೇರಿಸಿದ್ದರು!

## ಮನ್ನಣೆ (14:8-18)

ಒಂದು ದಿನ ಪೌಲನು ಲುಸ್ತ್ರದಲ್ಲಿ ಯೇಸುವಿನ ಕುರಿತಾಗಿ ಹೇಳುತ್ತಿರುವಾಗ, "ಒಬ್ಬ ಮನುಷ್ಯನು ... ಅವನ ಮಾತುಗಳನ್ನು ಆಲಿಸುತ್ತಿದ್ದನು"[5] (ವಚನಗಳು 8, 9). ವೈದ್ಯನಾದ ಲೂಕನು ಅವನ ಬಾಹಿರ ಚಹರೆಯನ್ನು ನೋಡಿ, "ಅವನು ಹುಟ್ಟುಕುಂಟನಾಗಿದ್ದು ಎಂದಿಗೂ ನಡೆಯದೇ ಇದ್ದವನು, ಅವನ ಕಾಲುಗಳಲ್ಲಿ ಬಲವಿಲ್ಲದವನಾಗಿದ್ದನು" (ವಚನ 8).[6] 3ನೇ ಅಧ್ಯಾಯದಲ್ಲಿ ಪೇತ್ರನಿಂದ ಗುಣ ಹೊಂದಿದ ಹುಟ್ಟುಕುಂಟನ ನೆನಪು ಉಂಟಾಗುತ್ತದೆ.[7] ಈ ಲುಸ್ತ್ರದ ಕುಂಟನು ಭಿಕ್ಷಕನಾಗಿದ್ದನು ಎಂದು ತಿಳಿಸಿರುವದಿಲ್ಲ; ಬಹುಶಃ ಇರಬಹುದು.

ಪೌಲನ ಮಾತುಗಳನ್ನು ಅವನು ಕಿವಿಗೊಟ್ಟು ಕೇಳುತ್ತಿದ್ದನು. ನಂತರ ಪೌಲನು ಅವನನ್ನು ಸ್ಥಿರವಾಗಿ ನೋಡಿದನು[8] "ಅವನಲ್ಲಿ ವಾಸಿಯಾಗುವದಕ್ಕೆ ಬೇಕಾದ ನಂಬಿಕೆಯನ್ನು

ಪೌಲನು ಗಮನಿಸಿದನು" (ವಚನ 9). ಅಪೊಸ್ತಲರ ಕೃತ್ಯಗಳು 3ರ ಕುಂಟನಿಗೂ ಮತ್ತು ಈ ಮನುಷ್ಯನ ನಡುವೆ ಒಂದು ವ್ಯತ್ಯಾಸವಿದೆ. ಅಧ್ಯಾಯ 3ರ ಕುಂಟನಿಗೆ, ಗುಣವಾಗುವ ಮೊದಲು, ಯೇಸುವಿನಲ್ಲಿ ಅವನಿಗೆ ನಂಬಿಕೆಯಿತ್ತು ಎಂದು ನೋಡುವದಿಲ್ಲ (ಅವುಗಳ ಗುರುತು ಸಹ ಅವನಲ್ಲಿ ಇರಲಿಲ್ಲ[9]), ಆದರೆ ಗುಣ ಹೊಂದುವದಕ್ಕೆ ಈ ಕುಂಟನಲ್ಲಿ "ನಂಬಿಕೆ ಸಿದ್ಧವಾಗಿತ್ತು." ಕೆಲವು ಸಾರಿ ಗುಣ ಹೊಂದುವವರಲ್ಲಿ ಇರುವ ನಂಬಿಕೆಯ ಕುರಿತು ತಿಳಿಸಲಾಗಿರುತ್ತದೆ; ಕೆಲವು ಸಾರಿ ಇರುವದಿಲ್ಲ. ಮಹತ್ಕಾರ್ಯ ಮಾಡುವವನು ಯಾವಾಗಲೂ ನಂಬಿಕೆಯನ್ನು ಹೊಂದಿರಲೇಬೇಕು (ಮತ್ತಾಯ 17:19, 20; ಮಾರ್ಕ 16:14, 17); ಸ್ವೀಕರಿಸುವವನು ಹೊಂದಿರಲಿಲ್ಲ. J. W. ಮೆಕ್‌ಗಾರ್ವೆಯವರು ಹೇಳಿರುವಂಥ ಮಾತಿನಲ್ಲಿ ಸತ್ಯವಿದೆ, "ಪೌಲನಲ್ಲಿದ್ದಂಥ ನಂಬಿಕೆಯು ಅವನನ್ನು ಪೂರ್ಣಮಾಡಿತು ಎಂಬದಕ್ಕೆ ವಾಕ್ಯಗಳಲ್ಲಿ ಯಾವುದೇ ಆಧಾರಗಳಿರುವದಿಲ್ಲ."[10]

ಈ ಮನುಷ್ಯನು ನಂಬಿಕೆಯನ್ನು ಎಲ್ಲಿಂದ ಪಡೆದನು? ನಾವೆಲ್ಲರು ಹೊಂದಿಕೊಂಡಂಥ ಸ್ಥಳದಿಂದಲೇ: ದೇವರ ವಾಕ್ಯದ ಮೂಲಕ (14:9; ರೋಮಾಪುರ 10:17). ಪೌಲನು ಕ್ರಿಸ್ತನ ಕುರಿತು ಹೇಳುವಾಗ, ಯೇಸು ಮಾಡಿದ ಸ್ವಸ್ಥತೆಯ ಬಗ್ಗೆ ಹೇಳಿರಲೂ ಬಹುದು (10:38). ಯೇಸು ಪೌಲನ ಮೂಲಕವಾಗಿ ಮಾಡಿದ ಸ್ವಸ್ಥತೆಯ ಬಗ್ಗೆಯೂ ಹೇಳಿರ ಬಹುದು (14:3).

ಈ ಕುಂಟನ ನಂಬಿಕೆಯ ಕುರಿತು ಅಂತ್ಯಗೊಳಿಸುವ ಮೊದಲು, ಗ್ರೀಕ್ ಭಾಷಾಂತರದಲ್ಲಿ ನೋಡುವಂತೆ "*ರಕ್ಷಣೆ* ಹೊಂದುವಂಥ ನಂಬಿಕೆಯನ್ನು ಅವನಲ್ಲಿ ಕಾಣಲು." ಈ *ಹಿನ್ನೆಲೆಯಲ್ಲಿ*, "ರಕ್ಷಣೆ" ಎಂದರೆ "ಸ್ವಸ್ಥತೆ" ಎಂಬ ಅನುವಾದವನ್ನು ನೀಡಲಾಗಿದೆ. ಅದರ ಸಾಧ್ಯತೆ ಇರಬಹುದು, ಏಕೆಂದರೆ, ಅವನಲ್ಲಿ ಯೇಸುವಿನ ನಂಬಿಕೆಯನ್ನು ಪೌಲನು ಕಂಡುಕೊಂಡಿದ್ದನು - *ಆತ್ಮೀಕ* ರಕ್ಷಣೆಗೂ ಅವನಲ್ಲಿ ನಂಬಿಕೆಯಿತ್ತು. ಯೇಸು ದೈಹೀಕವಾಗಿಯೂ ಮತ್ತು ಆತ್ಮೀಕವಾಗಿಯೂ ಗುಣಪಡಿಸಲು ಶಕ್ತನು ಎಂಬದನ್ನು ಸಾಭೀತು ಪಡಿಸಲು ಅವನನ್ನು ಗುಣಪಡಿಸಿದ್ದನು.[11]

ಪೌಲನು ಮಾಡಿದ ಮೊದಲ *ಸ್ವಸ್ಥತೆಯ ದಾಖಲು* ಇದಾಗಿದೆ, ಆದರೆ ಇದೇ ಮೊದನೆಯದಾಗಿರಲಿಲ್ಲ. ಅವನು ಅಪೊಸ್ತಲನಾಗಿದ್ದರಿಂದ "ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು" (2 ಕೊರಿಂಥ 12:12). ಇಕೋನ್ಯದಲ್ಲಿ ಪೌಲನು ಮಂತ್ರ ವಾದಿಯನ್ನು ಶಪಿಸಿದ್ದನು (13:11). ಪೌಲ ಬಾರ್ನಬರ ಕೈಯಿಂದ "ಸೂಚಕ ಕಾರ್ಯಗಳೂ, ಅದ್ಭುತಕಾರ್ಯಗಳೂ ಆಗುವಂತೆ ದಯಪಾಲಿಸಿ ತನ್ನ ಕೃಪಾವಾಕ್ಯಕ್ಕೆ ಸಾಕ್ಷಿಕೊಟ್ಟದ್ದರಿಂದ, ಆತನ ಮೇಲೆ ಭರವಸವಿಟ್ಟು ಧೈರ್ಯದಿಂದ ಮಾತಾಡುತ್ತಿದ್ದರು" (14:3). ಆದ್ದರಿಂದ ಪೌಲನು ನಿನ್ನ ಕಾಲೂರಿ ನೆಟ್ಟಗೆ ನಿಂತುಕೊ ಎಂದು "ಮಹಾಧ್ವನಿಯಿಂದ ಹೇಳಿದನು" ಇತರರು ಇದನ್ನು ಗಮನಿಸುವಂತೆ ಹೇಳಿದನು (ವಚನ 10ಎ). ವಾಕ್ಯದ ಪರಿಣಾಮದ ಗುರುತಾಗುವಂತೆ ಅದ್ಭುತವನ್ನು ಮಾಡಿದ್ದನು.

ಪೌಲನು ಕುಂಟನಿಗೆ, "ನಿನ್ನ ಕಾಲೂರಿ ನೆಟ್ಟಗೆ ನಿಂತುಕೋ ಎಂದು ಹೇಳಿದನು" (ವಚನ 10ಬಿ). "ನಜರೇತಿನ ಯೇಸುವಿನ ಹೆಸರಿನಲ್ಲಿ ಎದ್ದು ನಡೆದಾಗ ಎಂದು ಪೇತ್ರನು ಹುಟ್ಟುಕುಂಟನಿಗೆ ಹೇಳಿದ ನಂತರ!" ಆ ನಂಬಿಕೆಯಿಲ್ಲದ ವ್ಯಕ್ತಿಯನ್ನು ಕೈ ಚಾಚಿ ಮೇಲಕ್ಕೆ ಎತ್ತಿದನು (3:6, 7). ಆದರೆ ಪೌಲನು ಈ ನಂಬಿಕೆ ಹೊಂದಿದ್ದ ಮನುಷ್ಯನನ್ನು ಸ್ಪರ್ಷಿಸುವ ಅಗತ್ಯತೆಯಿರಲಿಲ್ಲ. ಕೂಡಲೇ, "ಆ ಕುಂಟನು ನಂಬಿಕೆಯ ಕ್ರಿಯೆಯಿಂದ ಹಾರಿ ಕುಣಿದಾಡಿದನು" (14:10ಸಿ)!

ಈ ಸ್ವಸ್ಥತೆಯ ಮೂಲಕ, ಪೌಲ ಬಾರ್ನಬರು ತಾವು ದೇವರ ಸಂದೇಶಕರೆಂದು ಸಾಕ್ಷಿಕರಿಸಿದರು. ಆದರೆ, ಈ ಅದ್ಭುತಕಾರ್ಯದಿಂದ ಜನರು ಅವರನ್ನೇ ದೇವರೆಂದು *ಕರೆಯುವಂತೆ* ಮಾಡಿತ್ತು. "ಪೌಲನು ಮಾಡಿದ್ದನ್ನು ಗುಂಪು ಕೂಡಿದ್ದ ಜನರು ನೋಡಿ - ದೇವತೆಗಳು ಮನುಷ್ಯರ ರೂಪದಿಂದ ನಮ್ಮ ಬಳಿಗೆ ಇಳಿದು ಬಂದರು" (ವಚನ 11ಎ) ಎಂದು,

ಲುಕವೋನ್ಯ ಭಾಷೆಯಲ್ಲಿ ಕೂಗಾಡಿದರು. "ದೇವತೆಗಳು ಮನುಷ್ಯರ ರೂಪದಿಂದ ನಮ್ಮ ಬಳಿಗೆ ಇಳಿದುಬಂದರು ಎಂದು ಲುಕವೋನ್ಯ ಭಾಷೆಯಲ್ಲಿ ಕೂಗಾಡಿದರು. ಬಾರ್ನಬನ್ನು ದ್ಯೌಸ್ ಎಂದು ಕರೆಯಲ್ಪಟ್ಟನು"[12] (ವಚನಗಳು 11ಬಿ, 12ಎ). ಅವರು ಬಾರ್ನಬನನ್ನು ದ್ಯೌಸ್ ದೇವತೆಯೆಂತಲೂ, ಪೌಲನನ್ನು ಮಾತಾಡುವದರಲ್ಲಿ ಮುಖ್ಯನಾದ್ದರಿಂದ (2 ಕೊರಿಂಥ 10:10). ಅವನನ್ನು "ಹೆರ್ಮೆದೇವರೆಂತಲೂ,[13] ಅಂದುಕೊಂಡರು (ವಚನ 12ಬಿ). ಗ್ರೀಕರ ಪುರಾಣದಲ್ಲಿ ಹೆರ್ಮೆಯರು ದೇವರ ಸಂದೇಶಕನಾಗಿದ್ದರು.[14] ಪೌಲನು - ಕುಳ್ಳನಾಗಿದ್ದು[15] ಬಲವುಳ್ಳವನಾಗಿದ್ದರಿಂದ, ಮತ್ತು ಮಾತಿನಲ್ಲಿ ಚತುರನಾಗಿದ್ದರಿಂದ - ಒಲಂಪಸ್ ಪರ್ವತದಿಂದ ಬಂದ ಚುರುಕಾದ ಸಂದೇಶಕನು ಎಂದು ತಿಳಿದಿದ್ದರು.

ಲುಸ್ತ್ರದವರು, ಇಂಥಾ ಒಂದು ನಿರ್ಣಯವನ್ನು ಏಕೆ ತೆಗೆದುಕೊಂಡರು ಎಂದು ಯೋಚಿಸುವಾಗ, ಆ ಸ್ಥಳದ ಕುರಿತಾದ ವಿಷಯವನ್ನು ನಾವು ಅರಿಯಲೇಬೇಕು. ಈ ಇಬ್ಬರು ಸುವಾರ್ತಿಕರು ಉತ್ತಮರಾದ ಜನರೊಂದಿಗೆ ವ್ಯವಹರಿಸುತ್ತಿರುವದಿಲ್ಲ. ಲುಸ್ತ್ರದ ಅವಿಧ್ಯಾವಂತರನ್ನು ಅವರು ಎದುರಿಸುತ್ತಿದ್ದರು, ಅವರು ಮೂಡನಂಬಿಕೆಯವರಾಗಿದ್ದರು.[16] ಲುಸ್ತ್ರದವರು ಪುರಾತನ ಕಾಲದ ನಂಬಿಕೆಯನ್ನು ಹೊಂದಿದ್ದರು ಎಂದು ಒಬ್ಬರು ತಿಳಿಸುತ್ತಾರೆ:

> ಅವರ ಪುರಾತನ ನಂಬಿಕೆಯಂತೆ, ಗುರು ಹಾಗೂ ಬುಧ ಗ್ರಹಗಳು ಪೆರ್ಗೆಯ ಹಳ್ಳಿಯನ್ನು ಸಂಧಿಸಿದ್ದರು (ಲುಸ್ತ್ರವು ಪೆರ್ಗೆಯಲ್ಲಿತ್ತು.[17]) ಅವುಗಳು ಮನುಷ್ಯನ ರೂಪದೊಳಗೆ ಅವತರಿಸಿದ್ದರು. ಅವುಗಳ ಅತಿಥಿ ಸತ್ಕಾರವನ್ನು ಬಯಸಿದಾಗ, ಸಾವಿರಾರು ಜನರು ಅವರನ್ನು ತಿರಸ್ಕರಿಸಿದರು, ಆದರೆ ಬಡದಂಪತಿಗಳು ಅವರನ್ನು ಸ್ವೀಕರಿಸಿದರು. ಬಾಯಿಸ್ ಮತ್ತು ಫಿಲಮೋನ ಎಂಬವರು ಇವರು ಮನುಷ್ಯ ರೂಪದಲ್ಲಿ ಇಳಿದಿರುವರು ಎಂಬದನ್ನು ಅರಿಯದೆ, ಅವರನ್ನು ಸತ್ಕರಿಸಿದ್ದರು. ಆಗ ಅವರು ಆಶೀರ್ವದಿಸಲ್ಪಟ್ಟು, ಇತರರೆಲ್ಲರೂ ನಾಶವಾಗಿದ್ದರು [ಮಹಾಪ್ರವಾಹದ ಮೂಲಕ].[18]

ಆದ್ದರಿಂದ ಲುಸ್ತ್ರದ ಜನರು ಎರಡನೆಯ ಸಾರಿ ಈ ವಿಧವಾದ ತಪ್ಪು ಆಗದಂತೆ ನಿರ್ಧರಿಸಿದ್ದರು! ಈ ಸಮಯದಲ್ಲಿ ಆ ಇಬ್ಬರು ದೇವತೆಗಳನ್ನು ಘನಗಾಂಭೀರ್ಯದಿಂದ ಸನ್ಮಾನಿಸುವ ಆಚರಣೆಯನ್ನು ಕೈಗೊಂಡಿದ್ದರು!

ದ್ಯೌಸ್‌ನು ಲುಸ್ತ್ರ ದೇವತೆಯ ಮಾದರಿಯಾಗಿದ್ದರಿಂದ, ಆ ಜನರು ಬಹು ಆನಂದವುಳ್ಳವರಾಗಿದ್ದರು. ಆ ಆಚರಣೆಯ ನಡುವೆ, ಅವರ ಪೂಜಾರಿಗಳು ಯೋಗ್ಯವಾದ ಯಾಗವನ್ನು ಮಾಡಲು ಸಿದ್ಧರಾಗಿದ್ದರು, "ಊರ ಮುಂದಿದ್ದ[19] ದ್ಯೌಸ್ ದೇವರ ದೇವಸ್ಥಾನದ ಪೂಜಾರಿಯು ಎತ್ತುಗಳನ್ನು ಹೂವಿನ ಹಾರಗಳನ್ನೂ ಊರ ಬಾಗಿಲಿನ[20] ಹತ್ತಿರಕ್ಕೆ ತಂದು ಜನರೊಂದಿಗೆ ಅವರಿಗೆ ಬಲಿಕೊಡಬೇಕೆಂದಿದ್ದನು" (ವಚನ 13). ಎತ್ತುಗಳಿಗೆ ಶೃಂಗಾರ ಮಾಡಿದ್ದರು: ಅವುಗಳ ಕೊಂಬುಗಳಿಗೆ ಬಣ್ಣವನ್ನು ಬಳಿದು,[21] ಅವುಗಳ ಕೊರಳಿಗೆ ಹಾರಗಳನ್ನು ಹಾಕಿದ್ದರು.[22] ಅವುಗಳನ್ನು ಯಜ್ಞಮಾಡುವಾಗ, ಅವುಗಳ ರಕ್ತವನ್ನು ಶೇಖರಿಸಿ, ವೇದಿಯ ಮೇಲೆ ಚೆಲ್ಲುತ್ತಿದ್ದರು, ನಂತರ ಉಳಿದ ದೇಹಭಾಗವನ್ನು ಬೇಯಿಸಿ ತಿನ್ನುತ್ತಿದ್ದರು. ಜನರು ವಿಜೃಂಬಣೆಯ ಹಬ್ಬವನ್ನು ಆಚರಿಸಲು ಮುಂದಾಗಿದ್ದರು, ಅಲ್ಲಿ ಪೌಲ ಬಾರ್ನಬರೇ ಮುಖ್ಯ ಅತಿಥಿಗಳಾಗಿದ್ದರು!

ಪೌಲ ಬಾರ್ನಬರ ಬದಲಾಗಿ ನೀವು ಅಥವಾ ನಾವು ಆ ಸ್ಥಾನದಲ್ಲಿದ್ದಿದ್ದರೆ ಏನಾಗುತ್ತಿತ್ತು? ಅವರ ನೀಡುವ ಈ ಸತ್ಕಾರವನ್ನು ಒಪ್ಪಿಕೊಳ್ಳುತ್ತಿದ್ದೇವೆಯೆ? "ದೇವತೆಗಳ" ನಾವು ಧೇಯವನ್ನು ಹೊಂದಿದಂಥ ಜನರ ಕುರಿತಾಗಿ ಇತಿಹಾಸದಲ್ಲಿ ನೋಡುತ್ತೇವೆ. ಅದನ್ನು ಮೂಡನಂಬಿಕೆ ಹೊಂದಿದ್ದ ಜನರೇ ನೀಡಿರುವರು.[23] ಸುವಾರ್ತೆಯನ್ನು ಜನರು ಸ್ವೀಕರಿಸುವಂತೆ, ಅವರ ಸತ್ಕಾರವನ್ನು ಸ್ವೀಕರಿಸಿ, ಸೇವಕರುಗಳು ಹೊಂದಾಣಿಕೆ ಮಾಡಿಕೊಂಡು "ನಾವು ಅವರ

ಸತ್ಕಾರವನ್ನು ಸ್ವೀಕರಿಸದೆ ಹೋದರೆ, ಅವರಿಗೆ ಕೋಪ ಉಂಟಾದರೆ ಕ್ರಿಸ್ತನ ಸುವಾರ್ತೆಗೆ ಅವಕಾಶವನ್ನು ಕಳಕೊಳ್ಳುವೆವು" ಎಂಬ ಕಾರಣವನ್ನು ಸಹ ನೀಡಬಹುದಿತ್ತು.

ಜನರು ನೀಡುತ್ತಿದ್ದ ಮನ್ನಣೆಗೆ ಈ ಇಬ್ಬರು ಮನುಷ್ಯರು ಸ್ಪಂಧಿಸಲಿಲ್ಲ. ಅದರ ಬದಲಾಗಿ "ಇದನ್ನು ಕೇಳಿ ಅಪೊಸ್ತಲರಾದ[24] ಪೌಲ ಬಾರ್ನಬರು[25] ತಮ್ಮ ವಸ್ತ್ರಗಳನ್ನು ಹರಕೊಂಡು ಜನರ ಗುಂಪಿನೊಳಗೆ ಕೂಗುತ್ತಾ ನುಗ್ಗಿದರು" (ವಚನ 14). ಪೌಲ ಬಾರ್ನಬರು ಅದನ್ನು ಹೇಗೆ "ಕೇಳಿದರು" ಎಂದು ಲೂಕನು ತಿಳಿಸಿರುವದಿಲ್ಲ. ಬಹುಶಃ ಅವರು ಇಕೋನ್ಯ ಭಾಷೆಯನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ[26] ಪೂಜಾರಿಯು ಆ ಯಜ್ಞಪಶುವನ್ನು ತೋರಿಸುವವರೆಗೆ, ಅವರು ಆ ವಿಚಾರವನ್ನು ಅರ್ಥಮಾಡಿಕೊಳ್ಳಲಿಲ್ಲ. ಅದ್ಭುತ ನಡೆದ ತಕ್ಷಣ ಪೌಲ ಬಾರ್ನಬರು ಆ ಸ್ಥಳವನ್ನು ತೆರೆದು ಹೋಗಿದ್ದರಿಂದ, ಜನರ ಗುಂಪು ಅವರನ್ನು ಹುಡುಕಿ ಕಂಡುಕೊಳ್ಳುವವರ ಮತ್ತು ಅವರು ಯಜ್ಞವನ್ನು ಸಮರ್ಪಿಸುವವರೆಗೆ ತಿಳಿದುಕೊಳ್ಳಲಿಲ್ಲ.[27]

ಹೇಗೂ, ಆ ಸುವಾರ್ತಿಕರು ಈ ವಿಷಯವನ್ನು ತಿಳಿದುಕೊಂಡಾಗ, ಅವರು ಬ್ರಾಂತಿಗೊಂಡು "ತಮ್ಮ ಬಟ್ಟೆಗಳನ್ನು ಹರಿದುಕೊಂಡರು" ಬಟ್ಟೆಗಳನ್ನು ಹರಿದುಕೊಳ್ಳುವದು ಪುರಾತನ ಯೆಹೂದ್ಯರ ದುಃಖ ಸೂಚನೆಯಾಗಿತ್ತು.[28] ನಿಲುವಂಗಿಯ ಕುತ್ತಿಗೆ ಪಟ್ಟಿಯನ್ನು ಹಿಡಿದು, ದೇಹದ ಕೆಳಮುಖವಾಗಿ ಎದೆಯ ಭಾಗವು ಕಾಣುವವರೆಗೆ ಹರಿದುಕೊಂಡಿದ್ದರು. ಎದೆಯ ಭಾಗವನ್ನು ತೋರುವದರ ಮೂಲಕ, ತಮಗುಂಟಾದ ದುಗುಡವನ್ನು ತೋರ್ಪಡಿಸಿದ್ದರು. McGarvey ಯವರು ಇದನ್ನು ವಿವರಿಸಿ:

> ಜನರು ರೌದ್ರಾವೇಷಗೊಳ್ಳುವಾಗ, ಬಟ್ಟೆಗಳನ್ನು ಹರಿದುಕೊಳ್ಳುವ ಪ್ರತೀತಿ ಉಂಟಾಗಿತ್ತು ... ಸತ್ಯವೇದದಲ್ಲಿ ಇದು ಕಡೇಯ ಸಾರಿ ... ನಡೆದ ಘಟನೆಯಾಗಿದೆ. ಕ್ರೈಸ್ತ ನಂಬಿಕೆಯ (ಬೋಧಿಸಿರುವ) ಸ್ವಾಸ್ತ್ರವು ಯೆಹೂದ್ಯ ಕ್ರೈಸ್ತರ ಸಂಪ್ರದಾಯದಲ್ಲಿ ಲೀನವಾಗಿತ್ತು.[29]

ಪೌಲ ಬಾರ್ನಬರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ಜನರು ಗುಂಪಿನ ನಡುವೆ ಕೂಗುತ್ತಾ ನುಗ್ಗಿದರು:

> ... ಜನರೇ, ನೀವು ಮಾಡುವದು ಇದೇನು? ನಾವೂ ಮನುಷ್ಯರು, ನಿಮ್ಮಂಥ ಸ್ವಭಾವವುಳ್ಳವರು.[30] ನೀವು ಈ ವ್ಯರ್ಥವಾದ ಕೆಲಸಗಳನ್ನು ಬಿಟ್ಟುಬಿಟ್ಟು[31] ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ[32] ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿದ ಜೀವಸ್ವರೂಪನಾದ ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು[33] ಸುವಾರ್ತೆಯನ್ನು[34] ನಿಮಗೆ ಸಾರಿಹೇಳುವವರಾಗಿದ್ದೇವೆ[35] (ವಚನ 15).

ಗುಂಪು ಒಂದು ಕ್ಷಣ ಸ್ತಬ್ಧವಾಗುವಂತೆ ಅವರ ಮಾತುಗಳು ಯೋಜಿತಗೊಂಡಿದ್ದವು ಅದಕ್ಕೆ ಅವರು ಪ್ರತಿಕ್ರಿಯಿಸಿ "ಅವರ ಅನ್ಯದೇವತೆಗಳಾಗಿ, ಪೂಜೆಗೆ ಒಳಗಾಗುವ ಬದಲು, ಅಂತಹ ದೇವತೆಗಳಿಂದ ಅವರನ್ನು ಬದಲಿಸಲು ಮತ್ತು ನಿರ್ಜೀವಿತವಾದ ವಿಗ್ರಹಗಳ ಬದಲು ಜೀವವುಳ್ಳ ಸತ್ಯ ದೇವರ ಕಡೆಗೆ ಅವರನ್ನು ತಿರುಗಿಸಲು ಬಂದವರು ಎಂದು ತಿಳಿಸಿದರು!

ವಚನ 15ರಿಂದ 17ರವರೆಗಿನ ವಾಕ್ಯ ಭಾಗವನ್ನು "ಪೌಲನು ಅನ್ಯರಿಗೆ ಸಾರಿದ ಮೊದಲನೆಯ ಪ್ರಸಂಗ" ಎಂದು ದಾಖಲು ಮಾಡಲಾಗಿದೆ. ಅವರು ಬ್ರಾಂತಿಗೊಂಡು ಮಾತನಾಡಿದ ಮಾತುಗಳೇ ಪ್ರಸಂಗವಾಯಿತ್ತು ಎಂಬುದು ನನ್ನ ಸಂದೇಹವಾಗಿದೆ![36] ಹೇಗೂ, ಅನ್ಯರಾದ ಅಥೇನದವರಿಗೂ ಮತ್ತು ಈ ಜನರಿಗೂ ಮಾತನಾಡಿದ ಮಾತುಗಳ ನಡುವೆ ಇರುವ ಹೋಲಿಕೆಯನ್ನು ಗಮನಿಸುತ್ತೇವೆ (17:22-31). ಈ ಮೂರು ವಚನಗಳಲ್ಲಿ ಪೌಲ ಬಾರ್ನಬರು ಅನ್ಯರಿಗೆ ಸಾರಿದ ಪ್ರಸಂಗದ ವಿಧವನ್ನು ನೋಡುತ್ತೇವೆ.

ಜನರು ಇರುವಂಥ ಸ್ಥಳದಲ್ಲಿಯೇ, ಒಬ್ಬ ಬೋಧಕನು ಪ್ರಾರಂಭಿಸಬೇಕು. ಪಿಸಿದ್ಯದ

ಅಂತಿಯೋಕ್ಯದಲ್ಲಿನ ಸಭಾ ಮಂದಿರದಲ್ಲಿ ಪೌಲನು ಪ್ರಸಂಗಿಸಿದಾಗ, ಅವನು ಹಳೇ ಒಡಂಬಡಿಕೆಯ ವಾಕ್ಯವನ್ನು ಮುಖ್ಯ ಆಧಾರವನ್ನಾಗಿ ಮಾಡಿಕೊಂಡಿದ್ದನು (13:16-41). ಗ್ರಂಥಗಳ ಪರಿಜ್ಞಾನವಿಲ್ಲದ ಲುಸ್ತ್ರದ ಜನರನ್ನು ಅವನು ಎದುರಿಸಿದನು. ನೀಡುವದರ ಮೂಲಕ ತಪ್ಪು ದಾರಿಗೆ ನಡೆಸುತ್ತಾನೆ. ಒಬ್ಬನು ಯಾವುದಾದರು ಒಂದು ಕ್ಷೇತ್ರದಲ್ಲಿ ಪ್ರವೀಣನಾಗಿದ್ದರೆ, ಒಂದು ವೇಳೆ ಪ್ರಸಂಗ ಹಾಗು ಬೋಧನೆಯಲ್ಲೂ ಪ್ರವೀಣನಾಗಿರಬಹುದು, ಅವನ ಯಶಸ್ವಿಯನ್ನು ಜನರು ಒಪ್ಪಿಕೊಳ್ಳುವರು; ಮತ್ತು ಅವನನ್ನು ಕೊಂಡಾಡುವರು.[37] ಒಂದು ವೇಳೆ ಈ ವಿಧವಾದ ಕೊಂಡಾಟವನ್ನು ಅವನು ಒಪ್ಪಿಕೊಳ್ಳುವಾಗ, ಅವನು ತಾನು ಬಹು ದೊಡ್ಡವನು ಎಂದು ತಿಳಿಕೊಂಡರೂ; ಬಹು ಬೇಗ ತನ್ನ ಮನಸ್ಸನ್ನು ದೇವರಿಂದ ಮನುಷ್ಯರ ಕಡೆಗೆ ಸೆಳೆಯುವನು. ಅಥವಾ ಅವನು ಜನರ ಕೊಂಡಾಟವನ್ನು ನಿರಾಕರಿಸಿದರೆ, ಮೆಚ್ಚುಗೆ ವ್ಯಕ್ತ ಪಡಿಸಿದ ಜನರ ತಿರಸ್ಕಾರಕ್ಕೆ ಒಳಗಾಗುವನು.

ಸೇವಕರುಗಳು ಸೃಷ್ಟಿಯ ಮೂಲಕ ಆರಂಭಿಸಿದರು - ಅದನ್ನು ಆ ಗುಂಪು ತಮ್ಮ ಎದುರಿನಲ್ಲಿಯೇ ನೋಡಬಹುದಿತ್ತು - ಅದನ್ನು ಉಂಟುಮಾಡಿದವನ ಕುರಿತು ಮಾತನಾಡಿದರು. "ಪರಲೋಕ ಭೂಲೋಕಗಳನ್ನು ಅದರಲ್ಲಿ ಇರುವವುಗಳನ್ನು ಉಂಟುಮಾಡಿದ ಜೀವ ಸ್ವರೂಪನಾದ ದೇವರ ಕುರಿತು ಮಾತನಾಡಿದರು." ನಂತರ ಅವರು "ಗತಿಸಿಹೋದ ಕಾಲದಲ್ಲಿ ಆತನು ಎಲ್ಲಾ ಜನಾಂಗಗಳನ್ನು ತಮ್ಮ ತಮ್ಮ ಮನಸ್ಸಿಗೆ ತೋಚಿದ ಮಾರ್ಗಗಳಲ್ಲಿ ನಡೆಯುವದಕ್ಕೆ ಬಿಟ್ಟನು" (ವಚನ 16; ನೋಡಿರಿ 17:30). ಅವರು ಮಾಡಿದಂಥ ಎಲ್ಲಾ ಕಾರ್ಯಗಳನ್ನು ದೇವರು ಸಮ್ಮತಿಸಿದರು ಎಂಬ ಅರ್ಥವಲ್ಲ, ಅಥವಾ ವಿಗ್ರಹ ಪೂಜೆಯನ್ನು ಸಮ್ಮತಿಸಿದನು ಎಂಬುದಾಗಿಯೂ ಇರುವದಿಲ್ಲ (ರೋಮಾಪುರ 1:18-32). ಆದರೆ, ಇಸ್ರಾಯೇಲ್ಯರಿಗೆ ದೇವರು ಮಾರ್ಗದರ್ಶನ ನೀಡಿದಂತೆ, ಅವರನ್ನು ನಡೆಸಿರಲಿಲ್ಲ.

ಆದರೂ ಆತನು ತನ್ನ ವಿಷಯದಲ್ಲಿ ಸಾಕ್ಷಿಕೊಡದೆ ಇರಲಿಲ್ಲ, "ನಿಮಗೆ ಆಕಾಶದಿಂದ ಮಳೆಯನ್ನು ಸುಗ್ಗೀಕಾಲವನ್ನು ದಯಪಾಲಿಸಿ ಆಹಾರ ಕೊಟ್ಟು ನಿಮ್ಮ ಮನಸ್ಸುಗಳನ್ನು ಆನಂದದಿಂದ ತುಂಬಿಸಿ ಉಪಕಾರ ಮಾಡುತ್ತಾ ಬಂದವನು ಅತನೇ ಎಂದು ಹೇಳಿದನು" (ವಚನ 17). ಅನ್ಯರು, ಹಳೇ ಒಡಂಬಡಿಕೆಯನ್ನು ಹೊಂದದೆ ಇರಬಹುದು, ಆದರೆ ಅದರ ಆಶೀರ್ವಾದಗಳನ್ನು ಅನುಭವಿಸಿದರು (ಪರಲೋಕದಿಂದ ಮಳೆ, ಸುಗ್ಗೀಕಾಲ ಹಾಗೂ ಉತ್ತಮವಾದ ಆಹಾರವನ್ನು ಸೇವಿಸಿದರು) ಅವರು ತಮ್ಮ ಮನಸ್ಸುಗಳನ್ನು ಈ ಸತ್ಯದ ದೇವರ ಕಡೆಗೆ ತಿರುಗಿಸಬೇಕಿತ್ತು (ರೋಮಾಪುರ 1:19, 20).[38]

ಪೌಲ ಬಾರ್ನಬರ ಅಭಿಪ್ರಾಯಗಳನ್ನು ಆ ಜನರ ಗುಂಪು ಅರ್ಥಮಾಡಿಕೊಳ್ಳದಾದರು. ವಚನ 18ರಲ್ಲಿ, "ಅವರು ಈ ಮಾತುಗಳನ್ನು ಹೇಳಿದರೂ ಜನರನ್ನು ತಮಗೆ ಬಲಿಕೊಡದಂತೆ ತಡೆಯುವದು ಕಷ್ಟವಾಗಿತ್ತು." ಕೆಲವರ ಹೇಳಿಕೆಯಂತೆ, ಪೌಲನ ಪ್ರವೀಣತೆಯ ಮಾತುಗಳೇ, ಅವನು ದೇವತೆಯ ಸಂದೇಶಕನು ಎಂದು ಕೆಲವರ ಮನಸ್ಸಿನಲ್ಲಿ ದೃಢಪಡಿಸಿತ್ತು! ಆದರೆ, ಹೇಗೂ, ಆ ಇಬ್ಬರು ಮನುಷ್ಯರು ಅವರ ಬಲಿಯನ್ನು ನಿರಾಕರಿಸಿದ್ದರು ಎಂದು ಆ ಜನರು ತಿಳುಕೊಂಡಿದ್ದರು.

ಆ ಚಿತ್ರಣವನ್ನು ಅರ್ಥಮಾಡಿಕೊಳ್ಳಬೇಕಾದರೆ, ನಿಮ್ಮನ್ನೇ ಅವರ ಸ್ಥಾನದಲ್ಲಿ ಇರಿಸಿಕೊಳ್ಳಿರಿ. ಆ ಇಬ್ಬರು ಪರದೇಶಿಗಳನ್ನು ಅಧಿಕವಾಗಿ ಸನ್ಮಾನ ಮಾಡಲು ಜನರು ನೆರೆದು ಬಂದಿದ್ದರು, ಆದರೆ ಅವರ ಸನ್ಮನವು ತಿರಸ್ಕೃತಿಗೊಂಡಿತು. ಪೂಜಾರಿಗಳು ಅಲ್ಲಿ ನಿಂತಿರಬಹುದು.[39] ಅವರು ಅವಮಾನಗೊಂಡು ಈ ಎರಡು ಯಜ್ಞದ ಪಶುಗಳನ್ನು ಏನು ಮಾಡಬೇಕೆಂಬ ಗೊಂದಲಕೊಳಗಾಗಿದ್ದರು. "ದೇವತೆಗಳು ನಮ್ಮಲ್ಲಿಗೆ ಇಳಿದು ಬಂದಿದ್ದಾರೆ" ಎಂದು ಕೂಗುತ್ತಿದ್ದ ಜನರ ಗುಂಪಿನ ಬಗ್ಗೆ ಊಹಿಸಿಕೊಳ್ಳಿರಿ. ಅವರು ನಾಚಿಕೆಯಿಂದ ತಲೆ ತಗ್ಗಿಸಿ, ಆ ಸ್ಥಳವನ್ನು ಬಿಟ್ಟು ಹೋದರು, ಅವರು ಮೂರ್ಖರಾಗಿದ್ದರು ಎಂಬ ಭಾವನೆ ಉಂಟಾಗಿತ್ತು. ಆ ದಿನ ಪೌಲ ಬಾರ್ನಬರು ಯಾರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಲಿಲ್ಲ.

ಕೃಪಾವರಗಳನ್ನು ಹೊಂದಿರತಕ್ಕ ದೇವ ಸೇವಕರುಗಳು ಸೈತಾನನ ಮನ್ನಣೆ ತಪ್ಪಿಸಿಕೊಂಡು ಲುಸ್ತ್ರಕ್ಕೆ ಬಂದಿರುವರು. ಅವರು ನಮ್ಮ ಹೆಸರನ್ನು ಹಾಗೂ ನಮ್ಮ ದೇಶದ ಹೆಸರನ್ನು ಕೆಡಿಸುವಲ್ಲಿ ಮುಂದಾಗಬಾರದೆಂದು ನಾವು ನಿರ್ದರಿಸಿ, ನಿಮ್ಮ ಅನುಮತಿಯ ಮೇರೆಗೆ ಅವರ ಮಂತ್ರಗಳನ್ನು ಅಂತ್ಯಗೊಳಿಸುವೆವು; ಅವರು ದೃಷ್ಟ ಶಕ್ತಿಯ ಸಹಾಯದಿಂದಲೇ ಅದ್ಭುತಗಳನ್ನು ಮಾಡುತ್ತಿರುವವರು ಎಂದು ಹೇಳಿರಬಹುದು. ಇವರ ಈ ಅಂತಿಮವಾದ ತರ್ಕವು, ಮೂಡನಂಬಿಕೆಯನ್ನು ಹೊಂದಿದ್ದ ಆ ಜನರಲ್ಲಿ ಪರಿಣಾಮವನ್ನು ನೀಡಿರಬಹುದು. ದೇವತೆಗಳೇ ಅವರ ಪಟ್ಟಣಕ್ಕೆ ಇಳಿದು ಬಂದಿರುವರೆಂಬ ವಿಷಯವನ್ನು ತಿಳಿದಾಗ, ಲುಸ್ತ್ರದವರು ಆನಂದಗೊಂಡಿದ್ದರು. ಆದರೆ ದುರಾತ್ಮಗಳು ಅವರ ಪಟ್ಟಣಕ್ಕೆ ಬಂದಿದ್ದವು ಎಂದು ಅರಿಯುವಾಗ, ಅವರಲ್ಲಿ ಉಗ್ರತೆಯು ಉದ್ಭವಿಸಿತ್ತು.

ಪೌಲನಲ್ಲಿದ್ದಂಥ ಕೃಪಾವರಗಳನ್ನು ನಾವ್ಯಾರು ಹೊಂದಲು ಸಾಧ್ಯವಿಲ್ಲ. ಬಾರ್ನಬನು ದ್ಯೌಸನೆಂಬ ನಾಮಂಕಿತವನ್ನು ಪಡೆದಂತೆ ನಾವು ಪಡೆಯಲು ಸಾಧ್ಯವಿಲ್ಲ. ಆದಾಗ್ಯೂ ನಮ್ಮಲ್ಲಿ ಅನೇಕರು, ಚಿಕ್ಕ ಚಿಕ್ಕ ಯಶಸ್ವಿಯನ್ನು ಹೊಂದಿರುತ್ತೇವೆ. ಎಷ್ಟೇ ಬೆಲೆಯದರೂ, ದೇವರಿಗೆ ಮಹಿಮೆಯನ್ನು ಸಲ್ಲಿಸಲು ಮರೆಯಬೇಡಿರಿ.

## ನಿಂದನೆ (14:19, 20)

ತರುವಾಯ "ಅಂತಿಯೋಕ್ಯದಿಂದಲೂ ಇಕೋನ್ಯದಿಂದಲೂ ಯೆಹೂದ್ಯರು ಬಂದರು" (ವಚನ 19ಎ). ಯಜ್ಞದ ಕ್ರಮ ಭಂಗವಾದಾಗ, ಆ ಯೆಹೂದ್ಯರು ಬಂದರು ಮತ್ತು ಅವರ ಮುಖಗಳು ಕೆಂಪಾಗಿದ್ದು, ಅತಿ ಉದ್ವೇಗಗೊಂಡವರಾದರು ಎಂದು ಊಹಿಸುತ್ತೇನೆ.[40] ಇದೆ ಯೆಹೂದ್ಯರು, ಪೌಲ ಬಾರ್ನಬರನ್ನು ಅಂತಿಯೋಕ್ಯದಿಂದ ಹೊರ ಹಾಕಿದ್ದರು ಎಂಬದನ್ನು ನೆನಪು ಮಾಡಿರಿ. ಇಕೋನ್ಯದಲ್ಲಿ ಅವರನ್ನು ಯೆಹೂದ್ಯರು ಕಲ್ಲೆಸದು ಕೊಲ್ಲಲು ಪ್ರಯತ್ನಿಸಿದರು. ಈಗ ಅದೇ ಯೆಹೂದ್ಯರು, ಲುಸ್ತ್ರಕ್ಕೆ ಬಂದು ಆ ಪ್ರಸಂಗಿಗಳನ್ನು ಹಿಂಸೆ ಪಡಿಸಲು ಮುಂದಾದರು.[41] (ಅಂತಿಯೋಕ್ಯದವರು ನೂರು ಮೈಲಿಗಳ ಪ್ರಯಾಣ ಮಾಡಿದ್ದರು!) ಬೇಟೆಗಾರನಾದ ಪೌಲನು, ಬೇಟೆಯ ಪಶುವಾಗಿದ್ದನು!

ವಚನ 19ರಲ್ಲಿ ನಂತರ "ಅವರು ಬಂದು ಜನರನ್ನು ಪ್ರೇರ್ಶಿಸಿದರು."[42] ಆ ಜನರಲ್ಲಿದ್ದಂಥ ಸುಳ್ಳನ್ನು ಮತ್ತು ಅತಿ ಸತ್ಯವನ್ನು ಬಹುಶಃ ಈ ಕೆಳಕಂಡಂತೆ ಮೆಕ್‌ಗಾರ್ವೆಯವರು ವಿವರಿಸಿರುವರು:

> ನೀವು ಈ ಇಬ್ಬರು ಜನರನ್ನು ನಿಮ್ಮ ದೇವತೆಗಳೆಂದು ಅಂಗೀಕರಿಸಿರುವದನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಅವರ್‍ಯಾರೆಂದು ನಾವು ನಿಮಗೆ ವಿವರಿಸುತ್ತೇವೆ. ಅವರುಗಳು ಯೆಹುದ್ಯರಾಗಿದ್ದು, ಅಂತಿಯೋಕ್ಯದಿಂದ ನಿಮ್ಮ ಬಳಿಗೆ ಬಂದಿರುವರು ... ಅಲ್ಲಿ ಅವರು ತಮ್ಮ ಜೊತೆಯವರಾದ ಯೆಹೂದ್ಯರ ನಡುವೆ ಗೊಂದಲ ಉಂಟುಮಾಡಿರುವದರಿಂದ, ಕಲೀನ ಸ್ತ್ರೀಯರು ಹಾಗೂ ಪಟ್ಟಣದ ಅಧಿಕಾರಿಗಳು ಅವರನ್ನು ಹೊರಹಾಕಿದರು. ನಂತರ ಅವರು ಇಕೋನ್ಯಕ್ಕೆ ಹೋದರು, ಅಲ್ಲಿಯೂ ಗೊಂದಲ ಉಂಟುಮಾಡಿದ್ದರಿಂದ, ಅಲ್ಲಿನ ಅಧಿಕಾರಿಗಳು ಯೆಹುದ್ಯ ಮತ್ತು ಅನ್ಯರೊಂದಿಗೆ ಕೂಡಿ, ಅವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಇರುವಾಗ, ಅವರು ಕಳ್ಳರಂತೆ ತಪ್ಪಿಸಿಕೊಂಡು ಲುಸ್ತ್ರಕ್ಕೆ ಬಂದಿರುವರು. ಅವರು ನಮ್ಮ ಹೆಸರನ್ನು ಹಾಗೂ ನಮ್ಮ ದೇಶದ ಹೆಸರನ್ನು ಕೆಡಿಸುವಲ್ಲಿ ಮುಂದಾಗಬಾರದೆಂದು ನಾವು ನಿರ್ಧರಿಸಿ, ನಿಮ್ಮ ಅನುಮತಿಯ ಮೇರೆಗೆ ಅವರ ಮಂತ್ರಗಳನ್ನು ಅಂತ್ಯಗೊಳಿಸುವೆವು; ಅವರು ದುಷ್ಟ ಶಕ್ತಿಯ ಸಹಾಯದಿಂದಲೇ ಅದ್ಭುತಗಳನ್ನು ಮಾಡುತ್ತಿರುವವರು ಎಂದು ಹೇಳಿರಬಹುದು.[43]

ಇವರ ಈ ಅಂತಿಮವಾದ ತರ್ಕವು ಮೂಢ ನಂಬಿಕೆಯನ್ನು ಹೊಂದಿದ್ದ ಆ ಜನರಲ್ಲಿ

ಪರಿಣಾಮವನ್ನು ನೀಡಿರಬಹುದು. ದೇವತೆಗಳೇ ಅವರ ಪಟ್ಟಣಕ್ಕೆ ಇಳಿದು ಬಂದಿರುವರೆಂಬ ವಿಷಯವನ್ನು ತಿಳಿದಾಗ, ಲುಸ್ತ್ರದವರು ಆನಂದಗೊಂಡಿದ್ದರು, ಆದರೆ ದುರಾತ್ಮಗಳು ಅವರ ಪಟ್ಟಣಕ್ಕೆ ಬಂದಿದ್ದವು ಎಂದು ಅರಿಯುವಾಗ, ಅವರಲ್ಲಿ ಉಗ್ರತೆಯು ಉದ್ಭವಿಸಿತ್ತು.

ಜನರು ಕಟಾಕ್ಷಕ್ಕೆ ಒಳಗಾದಾಗ, ಯೆಹೂದ್ಯರು ಪೌಲನಿಗಾಗಿ ಕಾದುಕೊಂಡರು.[44] ಬಾರ್ನಬನು ದೊಡ್ಡ ವ್ಯಕ್ತಿತ್ವವನ್ನು ಹೊಂದಿದ್ದರಿಂದ, ಲುಸ್ತ್ರದವರು ಅವನಿಗೆ ಪ್ರಾಮುಖ್ಯತೆಯನ್ನು ನೀಡಿದ್ದರು, ಆದರೆ ಅಂತಿಯೋಕ್ಯದ ಹಾಗೂ ಇಕೋನ್ಯದ ಯೆಹೂದ್ಯರು ಅವರ ನಂಬಿಕೆಗೆ ಪೌಲನೇ ಅಡ್ಡಿಯಾಗಿದ್ದನು ಎಂದು ಪರಿಗಣಿಸಿದ್ದರು. ಈ ಹಿಂದೆ ಪೌಲನನ್ನು ಕಲ್ಲೆಸೆದು ಕೊಲ್ಲಲು ಪ್ರಯತ್ನಿಸಿದ್ದಾಗ ಅವನು ತಪ್ಪಿಸಿಕೊಂಡು ಹೋಗಿದ್ದನು (14:5, 6). ಈಗ ಪೌಲನು ಪಟ್ಟಣದಲ್ಲಿ ಪ್ರಸಂಗಿಸುತ್ತಿರುವಾಗ, ಅವನಿಗೆ ಯೆಹೂದ್ಯರು ಆಶ್ಚರ್ಯವುಂಟುಮಾಡಿರಬಹುದು. ಅವನನ್ನು ಸುತ್ತುವರಿದು ಕಲ್ಲೆಸೆಯಲು ಮುಂದಾಗಿರಬಹುದೆಂದು ನಾನು ಊಹಿಸುತ್ತೇನೆ.[45]

ಕಲ್ಲುಗಳು ಪೌಲನ ದೇಹವನ್ನು ಹೊತ್ತುವಾಗ, ಅವನಿಗೆ ಯಾವ ಆಲೋಚನೆಯು ಬಂದಿರಬಹುದು? ಈ ಹಿಂದೆ ಅವನು ನೋಡಿದ್ದ ಸ್ತೆಫನನ ಮರಣದ ಚಿತ್ರವು ಅವನ ಕಣ್ಣಿನ ಮುಂದೆ ಬಂದಿರಬಹುದು. ಬಹುಶಃ - "ನಾನು ಈ ರೀತಿ ಸಾಯುವುದೇ ಲೇಸು ಎಂದು" ಅವನು ಭಾವಿಸಿರಬಹುದು.

ಕೊನೆಯದಾಗಿ, ಪೌಲನ ಮುರಿದಂಥ ದೇಹವು ರಕ್ತದ ಮಡುವಿನಲ್ಲಿ ಬಿದ್ದಿತ್ತು. ಜನರು ಅವನ ದೇಹವನ್ನು ಒರಟಾದ ಮತ್ತು ಧೂಳಿನಿಂದ ತುಂಬಿದ ನೆಲದ ಮೇಲೆ ಎಳೆಯುತ್ತಾ ಊರಿನ ಆ ಚೆಯವರೆಗೂ ಬಂದರು. ಅಲ್ಲಿ ಅವನ ದೇಹವನ್ನು ಹದ್ದುಗಳಿಗೋ, ಮೃಗಗಳಿಗೋ ಆಹಾರವಾಗಿ ಬಿಸಾಡಿದರು.[46] ವಚನ 19ರ ಕೊನೆಯಲ್ಲಿ, "ಅವನು ಸತ್ತನೆಂದು ಭಾವಿಸಿ ಊರ ಹೊರಕ್ಕೆ ಎಳೆದುಬಿಟ್ಟರು" ಎಂಬದಾಗಿದೆ.

ನಿಮ್ಮಲ್ಲಿ ಕೆಲವರು ಪೌಲನೊಂದಿಗೆ ಹೋಲಿಸಿಕೊಳ್ಳಬಹುದು. ನಿಮಗೆ ಮನ್ನಣೆ ನೀಡಿದ ಜನರ ಮನಸ್ಸನ್ನು ಕೆಡಿಸಿದವರ ಕುರಿತಾಗಿಯೂ ನೀವು ಅರಿತಿರಬಹುದು; ಇದರ ನಿಮಿತ್ತ ಆ ಜನರನ್ನು ನಿಮ್ಮನ್ನು ನಿಂದಿಸಿರಬಹುದು - ಒಂದು ವೇಳೆ ದೈಹೀಕವಾಗಿಯೂ, ಮಾನಸಿಕವಾಗಿಯೂ, ನಿಂದನೆ ಮಾಡಿರಬಹುದು. ಅವರು ನಿಮ್ಮನ್ನು ದೂರಕ್ಕೆ ಎಳೆದು ಹಾಕಿರಬಹುದು, ನೀವು "ಸತ್ತಿರುವಿರಿ" ಎಂದು ಭಾವಿಸಿರಬಹುದು ಅಂತಹ ಪರಿಸ್ಥಿತಿಯಲ್ಲಿ ಸಿಲುಕಿರುವಾಗ ನೀವುಗಳು ಏನು ಮಾಡಬಹುದು? ನಾವು ಮುಂದುವರಿಯುವಾಗ, ಪೌಲನು ನಿಂದನೆಯನ್ನು ಎದುರಿಸಿದ ವಿಷಯದಲ್ಲಿ ನಿಮಗೆ ಉತ್ತರ ದೊರಕಬಹುದು.

ಸ್ವಲ್ಪ ಸಮಯದ ನಂತರ ಲುಸ್ತ್ರದಲ್ಲಿದ್ದ ಹೊಸ ಕ್ರೈಸ್ತರು ಊರ ಹೊರಗೆ ಇದ್ದ ಪೌಲನ ದೇಹದ ಸುತ್ತಲೂ ಬಂದು ಸೇರಿದರು.[47] "ಆದರೆ ಶಿಷ್ಯರು ಅವನ ಸುತ್ತಲು ನಿಂತುಕೊಂಡಿದ್ದರು" ಎಂದು ವಾಕ್ಯವು ಸರಳವಾಗಿ ತಿಳಿಸುತ್ತದೆ (ವಚನ 20ಎ). ಅವರ ದುಃಖ ಹಾಗೂ ಅನಿಶ್ಚಯತೆಯನ್ನು ತಿಳಿಯುವುದು ಸರಳವಾಗಿದೆ. ಆ ಶಿಷ್ಯರ ಹೆಸರುಗಳನ್ನು ಲೂಕನು ತಿಳಿಸಿರುವದಿಲ್ಲ, ಅವರಲ್ಲಿ ಅಜ್ಜಿಯಾದ ಲೋವಿಯಳು, ತಾಯಿಯಾದ ಯೋನಿಕೆಯಳು ಹಾಗೂ ಯೌವನಸ್ಥನಾದ ತಿಮೊಥೆಯನು ಸಹ ಇರಬಹುದು.[48] ನಂತರ ಪೌಲನು ತಿಮೊಥೆಯನಿಗೆ ಬರೆಯುವಾಗ, "... ನಾನು ಹಗಲಿರುಳು ನನ್ನ ಪ್ರಾರ್ಥನೆಗಳಲ್ಲಿ ನಿನ್ನನ್ನು ತಪ್ಪದೆ ಜ್ಞಾಪಿಸಿಕೊಳ್ಳುತ್ತೇನೆ. ನಿನ್ನ ಕಣ್ಣೀರುಗಳನ್ನು ನೆನಪಿಗೆ ತಂದು ನಿನ್ನನ್ನು ನೋಡಿ ಸಂತೋಷಭರಿತನಾಗಬೇಕೆಂದು ಅಪೇಕ್ಷಿಸುತ್ತೇನೆ ..." (2 ತಿಮೊಥೆ 1:3, 4). ಒಂದು ವೇಳೆ ಒಬ್ಬ ಬಾಲಕನ ಕಣ್ಣೀರಿನ ಕುರಿತು ಹೇಳಿರಬಹುದು.[49] ಬಹುಶಃ ಆತ್ಮೀಕ ನಾಯಕನಾದ ಪೌಲನ ಗಾಯವಾದ ದೇಹವನ್ನು ನೋಡಿ ಕಣ್ಣೀರು ಸುರಿಸಿರಬಹುದು. ಪಟ್ಟಣದ ಜನರು ಪೌಲನು ಸತ್ತುಹೋದನು ಎಂದು ತಿಳಿದಂತೆ, ಶಿಷ್ಯರೂ ಸಹ ಯೋಚಿಸಿರಬಹುದು.

ಪೌಲನು ಈಗಾಗಲೇ ಮರಣ ಹೊಂದಿದ್ದನೇ, ಕರ್ತನು ಅವನಿಗೆ ಮರು ಜೀವ ನೀಡಿದ್ದನೇ? ನಾವು ಅದನ್ನು ಅರಿಯೆವು. ಈ ಸಮಯದಲ್ಲಿಯೇ ಪೌಲನು "ಮೂರನೇ

ಆಕಾಶದ ಪರಿಯಂತರಕ್ಕೂ ಏರಿ ಹೋಗಿದ್ದನು ಎಂಬದು ಕೆಲವರ ಅಭಿಪ್ರಾಯ" (2 ಕೊರಿಂಥ 12:2). ಇದು ಪುನರುತ್ಥಾನವಾಗಿರಬಹುದು ಅಥವಾ ಇಲ್ಲದೆಯೂ ಇರಬಹುದು, ಈ ಕಥೆಯು ದೇವರ ಶಕ್ತಿಯಿಂದ ತುಂಬಿರುತ್ತದೆ. ಮರಣಕ್ಕೆ ಹತ್ತಿರವಾಗಿದ್ದ ಮನುಷ್ಯನು ಮರುದಿನವೇ ಅರವತ್ತು ಮೈಲಿಗಳ ಅಂತರವನ್ನು ಕ್ರಮಿಸಿದನು!

ಪೌಲನು ಪುನಶ್ಚೇತನಗೊಂಡಾಗ ಏನು ಮಾಡಿದನು? ವಚನ 20ರಲ್ಲಿ, "... ಅವನು ಎದ್ದು ಊರೊಳಕ್ಕೆ ಹೋದನು ..."[50] ಎಂದು ಬರೆದದೆ? ಪಟ್ಟಣದ ಒಳಗೆ ಅಂದರೆ ಅಲ್ಲಿ ಅವನ ವೈರಿಗಳಿದ್ದಲ್ಲಿಗೆ! ಅಲ್ಲಿಯೇ ಜನರು ಅವನನ್ನು ಅಂತ್ಯಗೊಳಿಸಬೇಕೆಂದಿದ್ದರು! ಬಹುಶಃ ಪೌಲನು ತನ್ನ ವೈರಿಗಳಿಗೆ ಕೆಲವು ವಿಷಯವನ್ನು ಸಾಭೀತುಪಡಿಸಬೇಕಿತ್ತು. ಮತ್ತು ಹೊಸ ಕ್ರೈಸ್ತರಿಗೆ ಸಹ ಕೆಲವು ಸಂಗತಿಗಳನ್ನು ಪ್ರಕಟಪಡಿಸಬೇಕಿತ್ತು. ಪೌಲನು ನಂತರ ತಿಮೊಥೆಗೆ ಬರೆಯುವಾಗ:

> ದೇವರು ನಮಗೆ ಕೊಟ್ಟಿರುವ ಆತ್ಮವು *ಬಲ* ಪ್ರೀತಿ ಶಿಕ್ಷಣಗಳ ಅತ್ಮವೇ ಹೊರತು ಹೇಡಿತನದ ಆತ್ಮವಲ್ಲ. ಆದದರಿಂದ ನೀನು ನಮ್ಮ ಕರ್ತನನ್ನು ಕುರಿತು ಹೇಳುವ ಸಾಕ್ಷಿಯ ವಿಷಯದಲ್ಲಾಗಲಿ ಆತನ ಸೆರೆಯವನಾದ ನನ್ನ ವಿಷಯದಲ್ಲಾಗಲಿ ನಾಚಿಕೆಪಡದೆ *ದೇವರ ಬಲವನ್ನು* ಆಶ್ರಯಿಸಿ ನನ್ನೊಂದಿಗೆ ಸುವಾರ್ತೆಗೋಸ್ಕರ ಶ್ರಮೆಯನ್ನನುಭವಿಸು (2 ತಿಮೊಥ 1:7, 8; ಒತ್ತಿ ಹೇಳಿದ್ದು ನನ್ನದು).

ಬರಿ ಅರ್ಥವಿಲ್ಲದ ಪದಗಳನ್ನು ತಿಮೊಥೆಗೆ ತಿಳಿಸಲಿಲ್ಲ; ಆ ವಾಕ್ಯಗಳು ಪೌಲನಲ್ಲಿ ಸದೃಢವಾಗಿದ್ದವು.

ಅಲ್ಲಿದ್ದ ಶಿಷ್ಯರಲ್ಲಿ ಉಂಟಾದ ಪ್ರತಿಕ್ರಿಯೆಯನ್ನು ಇನ್ನೊಂದು ಸಾರಿ ಅರ್ಥಮಾಡಿಕೊಳ್ಳಲು ಅಸಾಧ್ಯವಿಲ್ಲ. ಪ್ರೀತಿಯ ಕೈಗಳು ರಾತ್ರಿಯೆಲ್ಲಾ ಪೌಲನನ್ನು ಸಂತೈಸಿದವು ಇದರಲ್ಲಿ ಸಂದೇಹವೇ ಇಲ್ಲ, ಅಲ್ಲಿ ಸಂತೈಸುವ ಮಾತುಗಳಿಂದ ಅವನು ಪ್ರೋತ್ಸಾಹಗೊಂಡನು. ಅವರು ಅವನ ಗಾಯಗಳನ್ನು ತೊಳೆದು ಕಟ್ಟಿದರು.[51] ಅವನು ಸಹೋದರರಿಂದ ಮತ್ತು ಕರ್ತನಿಂದ ಸಂತೈಸುವಿಕೆಯನ್ನು ಹೊಂದಿದ ಮರುದಿನವೆ, ಪೌಲನು ಬಾರ್ನಬನೊಂದಿಗೆ ದಕ್ಷಿಣದ ದರ್ಬೆಗೆ ವಿಸ್ತಾರವಾದ ಪ್ರಯಾಣವನ್ನು ಕೈಗೊಂಡನು (ವಚನ 20ಸಿ).

ನಾವು ನಮ್ಮ ಪಾಠವನ್ನು ಅಂತ್ಯಗೊಳಿಸುವ ಮೊದಲು, ನಿಂದನೆ ಉಂಟಾಗುವಾಗ ಪೌಲನು ಕೈಗೊಂಡ ಕ್ರಮ ಮತ್ತು ಕೈಗೊಳ್ಳದ ಕ್ರಮಗಳ ಕುರಿತಾಗಿ ಅನೇಕ ವಿಷಯಗಳನ್ನು ಗಮನಿಸೋಣ: ಮೊದಲನೆಯದಾಗಿ, ನಿಂದನೆಯು ಉಂಟಾಗುವಾಗ ಕಹಿಭಾವನೆಯನ್ನು ತೋರ್ಪಡಿಸಲಿಲ್ಲ. ಮನ್ನಣೆಯು ದೊರಕಿದಾಗ ಅಹಂಭಾವ ಪಡಲಿಲ್ಲ. ಎರಡನೆಯದಾಗಿ, ತನ್ನ ನಿಂದಕರನ್ನು ಒಂದೇ - ಸಾರಿ ಎದುರಿಸಿದನು. ಮೂರನೆಯದಾಗಿ, ಅವನು ತನ್ನ ಸಹೋದರರನ್ನು ಅವಲಂಭಿಸಿ, ಅವರೊಂದಿಗೆ ಆಳವಾದ ಸಂಬಂಧವನ್ನು ಹೊಂದಿದ್ದನು. ನಾಲ್ಕನೆಯದಾಗಿ, ಬೇಸರಗೊಳ್ಳದೆ ಕರ್ತನ ಕೆಲಸವನ್ನು ಮುಂದುವರಿಸಿದನು. ಐದನೆಯದಾಗಿ, ನಿಂದಕನನ್ನೂ ಸಹ ತನ್ನ ಸ್ವಶಕ್ತಿಯಿಂದ ಎದುರಿಸದೆ ಕರ್ತನನ್ನೇ ಅವಲಂಭಿಸಿದ್ದನು. ನಂತರ ಅವನಿಗೆ ಲುಸ್ತ್ರದಲ್ಲಿ ಉಂಟಾದ ವೇದನೆ ಮತ್ತು ಹಿಂಸೆಯ ಕುರಿತಾಗಿ ಬರೆಯುವಾಗ, "ಅವೆಲ್ಲವುಗಳಿಂದ *ಕರ್ತನು* ನನ್ನನ್ನು ಬಿಡಿಸಿದನು!" ಅಂದನು (2 ತಿಮೊಥೆ 3:11; ಒತ್ತಿ ಹೇಳಿದ್ದು ನನ್ನದು). ನಿಂದನೆಗೆ ಮತ್ತು ಅಪಾರ್ಥಕ್ಕೆ ಒಳಗಾದವರೆಲ್ಲರಿಗೂ ಒಂದು ಒಳ್ಳೆಯ ಪಾಠವು ಇದರಲ್ಲಿ ಅಡಕವಾಗಿದೆ.

## ಮುಕ್ತಾಯ

ಪೌಲನು ಸ್ವೀಕರಿಸಿದ ಮನ್ನಣೆ ಮತ್ತು ನಿಂದನೆಯಲ್ಲಿ ಒಳಗೊಂಡಿರುವ "ಗೂಡಾರ್ಥವನ್ನು" ನಾನು ಇನ್ನೂ ಬಹಿರಂಗ ಪಡಿಸಿರುವದಿಲ್ಲ - ಅದರಿಂದ ಉಂಟಾಗುವ

ಒಳ್ಳೇದರ ಮತ್ತು ಕೆಟ್ಟದ್ದರ ಕುರಿತು ತಿಳಿಸಿರುವದಿಲ್ಲ. ಲುಸ್ತ್ರದ ಮತ್ತು ಗಲಾತ್ಯದ ಸಭೆಗಳಿಗೆ ಪೌಲನು ಬರೆಯುವಾಗ, ಆ ಗೂಡಾರ್ಥಗಳನ್ನು ಪೌಲನು ನಮಗೆ ನೀಡಿರುವನು: "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಿಂದಲೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (ಗಲಾತ್ಯ 2:20). ಪೌಲನು ಸತ್ತವನಾಗಿರುವಾಗ; ಕ್ರಿಸ್ತನು ಅವನಲ್ಲಿ ಜೀವಿಸುತ್ತಿದ್ದನು! ಸತ್ತ ಮನುಷ್ಯನನ್ನು ಹೊಗಳಿ, ಅವನನ್ನು ಹೆಮ್ಮೆಯಿಂದ ತುಂಬಿಸಲು ಸಾಧ್ಯವಿಲ್ಲ; ಸತ್ತವನನ್ನು ನಿಂದಿಸಿ, ಅವನು ತನ್ನ ಗೌರವವನ್ನು ಕಳೆದುಕೊಳ್ಳುವಂತೆ ಮಾಡಲು ಸಾಧ್ಯವಿಲ್ಲ.

ನನ್ನ ಅನುಭವವೇನೆಂದರೆ, ನಾವು ಯೋಗ್ಯರಲ್ಲದಾಗ ಮನ್ನಣೆ ದೊರೆಯುತ್ತದೆ. ನಿಂದನೆಗೆ ಪಾತ್ರರಾಗದಾಗ ನಿಂದಿಸಲ್ಪಡುತ್ತೇವೆ. ಈ ವಿಷಯಗಳ ಬಗ್ಗೆ ನಾನು ಹೆಚ್ಚು ಚಿಂತನೆ ಮಾಡುವದಿಲ್ಲ (ಆವೆಲ್ಲವುಗಳು ಸಮಾನವಾಗುತ್ತದೆ ಎಂದು ತಿಳಿಯುತ್ತೇನೆ). ಹೆಮ್ಮೆ ಮತ್ತು ನಿಂದನೆಯ ನಡುವೆ ನೀವು ತೊಯ್ದಾಡುವಾಗ, ಗಲಾತ್ಯ 2:20ನ್ನು ಒಂದು ಕಾಗದದಲ್ಲಿ ಬರೆದುಕೊಂಡು ಜೊತೆಯಲ್ಲಿ ಇಟ್ಟುಕೊಂಡಿರು. ಪೌಲನ ಸಿದ್ದಾಂತವು ನಿನ್ನ ಮನಸ್ಸಿಗೆ ಸ್ಪಷ್ಟವಾಗುವರೆಗೂ ಅದನ್ನು ಓದುತ್ತಲೇ ಇರು.

ದೇವರ ಚಿತ್ತವನ್ನು ಮಾಡುವದರಿಂದ ಸತ್ಯವಾದ ಯಶಸ್ವಿಯು ಉಂಟಾಗುತ್ತದೆ ಮತ್ತು ಆತನ ಸಂಬಂಧದಲ್ಲಿ ಯೋಗ್ಯತೆಯ ಅಡಕವಾಗಿರುತ್ತದೆ ಎಂದು ತಿಳಿದುಕೊಳ್ಳಲು ನಮ್ಮ ದೇವರು ನಿಮಗೆ ಸಹಾಯಮಾಡಲಿ. ಮನ್ನಣೆ ಮತ್ತು ನಿಂದನೆಯ ಸನ್ನಿವೇಶಗಳಲ್ಲಿ, ದೇವರ ಬಲವನ್ನು ಹೊಂದಿದವರಾಗಿ ಅದರ ಪರಿಣಾಮವು ನಮ್ಮ ಮೇಲೆ ಬೀರದಂತೆ ಎಚ್ಚರ ವಹಿಸೋಣ.

## ದೃಷ್ಯ ಸಂಬಂಧವಾದ – ಟಿಪ್ಪಣಿ

ಹೆರ್ಮೆಸ್ ಮತ್ತು ಮರ್ಕ್ಯುರಿಗಳ ಚಿಹ್ನೆಗಳನ್ನಾಗಿ ಉಪಯೋಗಿಸುವ ಸ್ಥಳದಲ್ಲಿ ನಾವುಗಳು ಇರುವದಾದರೆ (ಅವುಗಳ ಚುರುಕತನದ ಸೇವೆಯನ್ನು ಗಮನಿಸಿರಿ), ಹೆರ್ಮೆಸ್ ಮತ್ತು ಮರ್ಕ್ಯುರಿಗಳು "ದೇವ ಸಂದೇಶಕರೆಂಬದಾಗಿ" ಕುರಿತು ಮಾತನಾಡಲು ಅದರ ಜಾಹಿರಾತಿನ ದೃಶ್ಯವನ್ನು ಉಪಯೋಗಿಸಿರಿ.

---

ಟಿಪ್ಪಣಿಗಳು

[1]ಇಕೋನಿಯವು ಪಿಸಿದ್ಯದಲ್ಲಿತ್ತು; ಪಿಸಿದ್ಯದ ತಪ್ಪಲಿನಲ್ಲಿ ಅಂತಿಯೋಕ್ಯವು ಇತ್ತು. [2]"ಪೌಲನ ಮೊದಲ ಸೇವಾ ಪ್ರಯಾಣದ" ವಿವರದ ನಕ್ಷೆಯನ್ನು ನೋಡಿರಿ. [3]ಅಪೊಸ್ತಲರ ಕೃತ್ಯಗಳು 16:1, 2. "ಹೊಸದಾದ ತಂಡ - ಹಾಗೂ ಹೆಚ್ಚಿನವರ" ಪಾಠವನ್ನು ನೋಡಿರಿ. [4]ಒಂದು ಸಭಾಮಂದಿರವನ್ನು ಸ್ಥಾಪಿಸಲು ಹತ್ತು ಜನರ ಅಗತ್ಯತೆಯಿತ್ತು. [5]ವಚನ 9ರ ಗ್ರೀಕ್ ಭಾಷೆಯ ಭಾಷಾಂತರವಾದ "ಮಾತನಾಡಿದನು" ಎಂಬದು ಸಾಧಾರಣ ಮಾತಾಗಿದೆ, ಅದು ಪ್ರಸಂಗವಲ್ಲ. ಪೌಲನು ಪ್ರಸಂಗಿಸುತ್ತಿರಬಹುದು, ಕುಂಟನು ಕೇಳುತ್ತಿರುವಾಗ ಒಬ್ಬೊಬ್ಬರ ಜೊತೆಯಲ್ಲಿ ಮಾತನಾಡಿರಬಹುದು. [6]ಅವನಲ್ಲಿ ಮಾನಸಿಕ ತೊಂದರೆಯಿರಲಿಲ್ಲ. ಅಪೊಸ್ತಲರ ಕೃತ್ಯದ ಒಂದನೆ ಪಾಠವನ್ನು ನೋಡಿರಿ. [7]ಆದಕಾರಣ ಈ ಎರಡು ಸ್ವಸ್ತತೆಗಳು ಒಂದೇ ಆಗಿದ್ದವು ಆದರೆ ಪೇತ್ರನಿಗಿದ್ದಂತ ಶಕ್ತಿಯು ಪೌಲನಿಗೂ ಸಹ ಇತ್ತು ಎಂದು ತೋರಲು ಲೂಕನು ಇದನ್ನು ತಿಳಿಸಿರುವನು ಎಂಬದು ಕೆಲವರ ಅಭಿಪ್ರಾಯ, ಹೋಲಿಕೆಗಳಲ್ಲಿ ವ್ಯತ್ಯಾಸವಿದೆ. ಪೌಲನು ಪ್ರಯೋಗಿಕವಾಗಿ ಮಾಡಿದ್ದನು. [8]ಪೌಲನು ಅದ್ಭುತವಾದ ಅಥವಾ ಆ ಮನುಷ್ಯನಲ್ಲಿದ್ದ ನಂಬಿಕೆಯ ಪ್ರತಿಕ್ರಿಯೆಯ ನೋಟವನ್ನು ನೋಡಿದನು ಎಂದು ಲೂಕನು

ತಿಳಿಸಿರುವದಿಲ್ಲ. [9]3:3-5ರ ಟಿಪ್ಪಣಿ ನೋಡಿರಿ. [10]J. W. McGarvey *New Commentary on Acts of Apostles,* vol. 1 (Delight, Ark.: Gospel Light Publishing Co., n.d.), 40. (Emphasis his.)

[11]4:10, 12 ಟಿಪ್ಪಣಿಯನ್ನು *ಅಪೊಸ್ತಲರ ಕೃತ್ಯಗಳು, 1* ಪುಸ್ತಕವನ್ನು ನೋಡಿರಿ. [12]KJVಯಲ್ಲಿ "ಗುರು" ಎಂಬುದು ಲ್ಯಾಟೀನ್ ಭಾಷೆಯ "ದ್ಯೌಸ" ಗ್ರೀಕ್‌ನಲ್ಲಿ ಗುರು ಎಂಬುದಾಗಿರದೆ "ದ್ಯೌಸ್" ಎಂಬದಾಗಿದೆ. ಲುಸ್ತ್ರದವರು ದ್ಯೌಸ ಮತ್ತು ಹೆರ್ಮೆ ದೇವತೆಗಳನ್ನು ಪೂಜಿಸುತ್ತಿದ್ದರು ಎಂದು ಭೂಗೋಳ ತಜ್ಞರು ತಿಳಿಸಿರುವರು. [13]KJVಯ "ಬುದ" ಎಂಬುದು ಲ್ಯಾಟೀನ್ ಭಾಷೆಯ "ಹೆರ್ಮೆದೇವತೆ." [14]ಹೆರ್ಮೆ ಅಥವಾ (ಬುಧ) ಅವನ ಪಾದದಲ್ಲಿನ ರೆಕ್ಕೆಗಳಿಗೆ ಎಂಬುದಾಗಿ, ಅದರ ವೇಗದಂತೆಯೇ ದೇವ ಸಂದೇಶವನ್ನು ಒಯ್ಯುತ್ತಿದ್ದನು. ಅವನು "ದೇವತೆಗಳು ಅನುಯಾದಕ" ಹರ್ಮೆನ್ಯೂಟ್ಸ್ ಎಂದರೆ "ಅನುವಾದ ವಿಜ್ಞಾನ" (ವಾಕ್ಯ ಅನುವಾದಕ್ಕೆ ಮಾತ್ರ ಸೀಮಿತ). [15]ಬಾರ್ನಬನ ಹೋಲಿಕೆಯ ವಿವರ, ಪೌಲನ ತೋರ್ಪಡಿಸಿಕೆಯ ವಾಕ್ಯ, ಅವನ ತೋರ್ಪಡಿಕೆಯ ಸಂಪ್ರದಾಯ. [16]ಮುಂದಿನ ಪಾಠದಲ್ಲಿ ಪೌಲನು ಎದುರಿಸಿದ ಮತ್ತೊಂದು ಮೂಢನಂಬಿಕೆಯ ಜನರ ಕುರಿತು ನೋಡೋಣ (28:1-6). [17]ಕಳೆದ ದಿವಸಗಳಲ್ಲಿ, ಆ ಕ್ಷೇತ್ರವನ್ನೆಲ್ಲಾ ಪೆರ್ಗೆ ಎಂದು ಕರೆಯುತ್ತಿದ್ದರು, ಈ ಸಮಯದಲ್ಲಿ ಲುಸ್ತ್ರದ ಕ್ಷೇತ್ರವನ್ನು ಗಲಾತ್ಯ ಎಂದು ಕರೆಯುತ್ತಿದ್ದರು. [18]ಲಿಚರ್ಡ್ ಆಸ್ಟರ್. [19]ಪುರಾತನ ಲುಸ್ತ್ರದಲ್ಲಿಯೂ ಇದೇ ವಿಧವಾದ ಪೂಜಾಸ್ಥಳಗಳಿದ್ದವು, ಅದು ಆ ಕ್ಷೇತ್ರದ ಆಚರಣೆಯ ಕುರುಹು ಆಗಿತ್ತು. [20]"ಬಾಗಿಲು" ಎಂಬುದು ಊರಬಾಗಿಲು ಎಂದು ಸ್ಪಷ್ಟವಾಗಿರುವದಿಲ್ಲ, ದೇವಸ್ಥಾನದ ಬಾಗಿಲು ಅಥವಾ, ಪೌಲ ಬಾರ್ನಬರು ತಂಗಿದ್ದ ಮನೆಯಬಾಗಿಲಾಗಿರಬಹುದು.

[21]ಉಣ್ಣೆ ಅಥವಾ, ಇತರೆ ವಸ್ತುವಿನಿಂದ ಈ ಹಾರಗಳನ್ನು ಮಾಡಿರಬಹುದು. [22]ನನ್ನ ಪ್ರವಾಸದಲ್ಲಿ ಕೆತ್ತಿದ ಎತ್ತುಗಳ ಕುತ್ತಿಗೆಗೆ ಹಾಕಿರುವ ಹಾರಗಳನ್ನು ನೋಡಿರುವೆನು. [23]ಅಧ್ಯಾ 12ರಲ್ಲಿ ಹೆರೋದ ಅಗ್ರಿಪ್ಪ I ಬಗ್ಗೆ ತಿಳಿದಿರುವೆವು. [24]ವಚನ 4ರಂತೆ ಅಪೊಸ್ತಲರು, ಪೌಲ ಬಾರ್ನಬರನ್ನು ಕಳುಹಿಸಿದರು ಎಂಬ ಸೂಚನೆಗೆ ಅಂತಿಯೋಕ್ಯ ಸಭೆಯವರು ಎಂದು ತಿಳಿಸಲಾಗಿದೆ. ಅಧ್ಯಾಯ 14ರಲ್ಲಿ ಮಾತ್ರ ಲೂಕನು ಅದರ ಹೇಳಿಕೆಯನ್ನು ನೀಡಿರುವನು "ಶಿಷ್ಯರ ಹೊರತು ಪಡಿಸಿ ಒಳಸಿರುವ" "ಅಪೊಸ್ತಲರು" ಎಂಬ ಪದ ಪ್ರಯೋಗ ಮಾಡಲಾಗಿದೆ. [25]13:13ರಲ್ಲಿ "ಪೌಲ ಮತ್ತು ಅವನ ಸಂಗಡಿಗರು" ಎಂಬ ಹೇಳಿಕೆ ನೀಡಲಾಗಿದೆ. ಪೌಲನ ಮುಂದೆ ಬಾರ್ನಬನ ಹೆಸರನ್ನು ತಿಳಿಸಲಾಗಿದೆ, ಬಾರ್ನಬನನ್ನು ಪೌಲನಿಗಿಂತ ದೊಡ್ಡವನು ಎಂದು ತಿಳಿದು, ದ್ಯೌಸ, ಅಂದರೆ ಗ್ರೀಕರ ಪ್ರಮುಖ ದೇವತೆ. [26]ಈ ಕ್ಷೇತ್ರ ದಲ್ಲಿ ಜನರು ಲುಕವೋನ್ಯ ಭಾಷೆಯನ್ನು ಮಾತನಾಡುತ್ತಿದ್ದರು ಎಂದು ವಿವರಿಣೆಕಾರರು ಕಾರಣ ನೀಡಿರುವರು. ಹಾಗೂ ಪೌಲನಿಗೆ ಅನ್ಯ ಭಾಷೆ ಮಾತನಾಡುವ ವರವಿತ್ತು (1 ಕೊರಿಂಥ 14:18). ಹಾಗೂ ಅದನ್ನು ವಿಶೇಷಿಸುವ ವರವನ್ನು ಹೊಂದಿದ್ದನು ಆದುದರಿಂದ "ಬಾಗಿಲು" ಎಂಬ ಪದವನ್ನು ಅರ್ಥೈಸಿಕೊಂಡನು. [27]ಅವರು ಇಳುಕೊಂಡಿದ್ದ "ಮನೆಯ ಬಾಗಿಲಿನ" (ವಚನ 13) ಬಳಿಗೆ ಗುಂಪು ನುಗ್ಗಿದರ ಎಂಬ ಪ್ರತೀತಿ.[28]ಈ ಸಂಪ್ರದಾಯವು ಯಾಕೋಬನ ಹಿನ್ನೆಲೆಯನ್ನು ಹೊಂದಿರುತ್ತದೆ (ಆದಿಕಾಂಡ 37:29-34). ಭಯದ ನಟನೆಯನ್ನು ಈ ವಿಧವಾಗಿ ತೋಲಿಸಲಾಗಿದೆ (ಮತ್ತಾಯ 26:65). [29]J. W. McGarvey, 43. ಯೋವೇಲ 2:13. [30]ಅಪೊಸ್ತಲರ ಕೃತ್ಯಗಳು 10:26.

[31]"ನಾವು ನಿಮಗೆ ಯೇಸುವಿನ "ಶುಭ ಸಮಾಚಾರವನ್ನು ತಂದಿರುವೆವು" (NIV) ಅದು ಉತ್ತಮವಾದ ಅನುವಾದವಾಗಿದೆ (RSV) ಅವರು ಮಾರ್ತಿಗಳನ್ನು ತೊರೆದು ಜೀವವುಳ್ಳ ದೇವರನ್ನು ಆರಾಧಿಸುವಂಥದ್ದೇ, "ಶುಭಸಮಾಚಾರವಾಗಿದೆ" ನಂತರ ಪೌಲನು ಯೇಸುವಿನ ಕುರಿತಾದ ಶುಭಸಮಾಚಾರವನ್ನು ತಿಳಿಸುವದಕ್ಕಿದ್ದನು. [32]ಅಪೊಸ್ತಲರ ಕೃತ್ಯಗಳು 3:19. [33]ಹಳೆ ಒಡಂಬಡಿಕೆಯಲ್ಲಿ ವಿಗ್ರಹಗಳ ಕುರಿತು ವ್ಯರ್ಥವಾದ ಸಂಗತಿ ಎಂಬದಾಗಿತ್ತು (ಕೀರ್ತನೆ 31:6; ಯೋನ 2:8). "ವ್ಯರ್ಥಿ" "ಖಾಲಿ" ಅಥವಾ "ಅಯೋಗ್ಯ" NIVಯಲ್ಲಿ "ಈ ವ್ಯರ್ಥವಾದ ಸಂಗತಿ" ಅದು ವಿಗ್ರಹದ ಖಂಡನೆಯಾಗಿತ್ತು (ಯೆಶಾಯ 44:9-20). [34]1 ಥೆಸಲೊನೀಕ 1:9. [35]ಅಪೊಸ್ತಲರ ಕೃತ್ಯಗಳು 17:26. [36]ಹಿಂದಿನ ಪಾಠದ ಟಿಪ್ಪಣಿ, ಪೌಲನ ಪರವಾಗಿ, ಲೂಕನು ಐದು ಸಂದೇಶಗಳನ್ನು ನೀಡಿರುವನು. ಇವುಗಳನ್ನು ಆ ಐದರಲ್ಲಿ ಒಂದು ಎಂದು ನಾನು ಪರಿಗಣಿಸಿರುವದಿಲ್ಲ. [37]"ಈ ದಿನದ ಸತ್ಯವನ್ನು" ಹೊಂದದವರಿಗೂ ಸಹ ಇದನ್ನು ಬೋಧಿಸಬೇಕು. [38]ಇದು ಪ್ರಸಂಗವಾಗಿದ್ದರೆ, ಪೌಲನು ಇದನ್ನು ದೇವರ ಸಾಕ್ಷಿಗಾಗಿ ಬಳಸಿರಬಹುದಿತ್ತು, (ಸೃಷ್ಟಿ) ವರ್ತಮಾನದ ಸಾಕ್ಷಿಗೂ ಬಳಸಬಹುದಿತ್ತು (ಪೌಲ ಮತ್ತು ಇತರರು ಯೇಸುವಿನ ಪುನರುತ್ಥಾನವನ್ನು ಕಂಡಿದ್ದರು). [39]"ಎತ್ತುಗಳು" ಎಂಬುದು ಬಹುಪದವಾಗಿರುವದರಿಂದ, ಅಲ್ಲಿ ಎರಡಕ್ಕಿಂತಲೂ ಹೆಚ್ಚಾಗಿ ಇರಬಹುದು. [40]ಲುಸ್ತ್ರದವರು ಪೌಲ ಬಾರ್ನಬರನ್ನು ದೇವತೆಗಳೆಂದು ಕರೆದ ಮತ್ತು ಯೆಹೂದ್ಯರು ಅವರನ್ನು ಸಂಧಿಸಿದ ನಡುವಿನ ಸಮಯವು ಹೆಚ್ಚಾಗಿರಬಹುದು.

[41]ಇವರು ಇಕೋನ್ಯದ ಯೆಹೂದ್ಯರಾಗಿದ್ದು, ವ್ಯಾಪಾರಕ್ಕಾಗಿ ಲುಸ್ತ್ರಕೆ ಬಂದವರು ಎಂಬುದು ಕೆಲವರ ಅಭಿಪ್ರಾಯ, ಆಗ ಪೌಲ ಬಾರ್ನಬರು ಅಲ್ಲಿರುವರನ್ನು ಕಂಡುಕೊಂಡರು. ಅವರು ಪೌಲ ಬಾರ್ನಬನಿಗೆ ತೊಂದರೆ ನೀಡುವ ಕಾರಣದಿಂದ ಬಂದವರು ಎಂದು ಲೂಕನು ತಿಳಿಸಿರುವನು. 17:13ರಲ್ಲಿ ವಿವರ ತಿಳಿಯೋಣ. [42]ಮನ್ನಣೆಯಿಂದ ನಿಂದನೆಗೆ ಹೋದ ಗುಂಪುಗಳ ಕುರಿತು, ಯೇಸುವಿನ ಜೀವಿತಕಾಲದಲ್ಲಿ ಉಂಟಾದ ಹೋಲಿಕೆಯನ್ನು ಸಹ ನೋಡಬಹುದು (ಲೂಕಾ 4:22, 28). ಸಬ್ಬತ್ ದಿನದಲ್ಲಿ ಜನರು "ಹೊಸನ್ನ" ಎಂದರು. ಶುಕ್ರವಾರ "ಶಿಲುಭೆಗೆ ಹಾಕಿಸು" ಎಂದರು. [43]J. W. McGarvey, 45. [44]ಬಾರ್ನಬನನ್ನು ಹೊರತುಪಡಿಸಿ, ಪೌಲನನ್ನು ಕಲ್ಲೆಸೆದರು. ಮುಂದೆ ಅದರ ಕಾರಣವನ್ನು ನೀಡಲಾಗಿದೆ. ಅದರ ವಿವರ ಸರಳವಾಗಿದೆ. ಪ್ರಾಯಶಃ ಪೌಲನು ಅವರ ಕೈಗೆ ಸಿಕ್ಕಿರಬಹುದು. [45]ಕಲ್ಲೆಸೆಯುವದು ಯೆಹೂದ್ಯರ ಪದ್ಧತಿಯಾಗಿತ್ತು. ಇದರಲ್ಲಿ ಯೆಹೂದ್ಯರು ನಾಯಕತ್ವ ವಹಿಸಿದ್ದರು, ಅದರೆ ಸ್ತೇಫನನನ್ನು ಊರ ಹೊರಗೆ ತೆಗೆದುಕೊಂಡು ಹೋದ ಹಾಗೆ, ಪೌಲನನ್ನು ತೆಗೆದು ಕೊಂಡುಹೋಗಲಿಲ್ಲ, ಇದು ಯೆಹೂದ್ಯರ ಪದ್ಧತಿಗೆ ವಿರುದ್ಧವಾಗಿತ್ತು (7:58). [46]ಅಮೆರಿಕೆಯ "ರೋಡ್ ಕಿಲ್" ಎಂಬ ಪದ ಇದಕ್ಕೆ ಸಮನಾಗಿದೆ. [47]ಪ್ರಾಯಶಃ ಬಾರ್ನಬನು ಅವರೊಂದಿಗಿರಬಹುದು. [48]ಪೌಲನು ತಿಮೊಥೆಯನ್ನು ಪರಿವರ್ತಿಸಿದ್ದನು (1 ತಿಮೊಥೆ 1:2). ಪೌಲನು ಲುಸ್ತ್ರಕ್ಕೆ ಎರಡನೆಯ ಸೇವಾ ಪ್ರಯಾಣವನ್ನು ಮಾಡವದೊರೊಳಗಾಗಿ, ತಿಮೊಥೆಯು ಪ್ರಸಂಗಿಯಾಗಿದ್ದನು (16:1, 2). ಪೌಲನ ಪ್ರಥಮ ಪ್ರಯಾಣದಲ್ಲಿ ತಿಮೊಥಿಯು ಪರಿವರ್ತನೆ ಗೊಂಡಿರಬಹುದು. ತಿಮೊಥೆಯ ತಾಯಿ ಹಾಗೂ ಅಜ್ಜಿಯು ಪರಿವರ್ತನೆಗೊಂಡಿರಬಹುದು. [49]ಅವನ ವಯಸ್ಸು ಹದಿನೈದಾಗಿರಬಹುದು ಎಂದು ಮೆಕ್ ಗಾರ್ವೆ ತಿಳಿಸಿರುವರು. [50]ವೆಸ್ಟರ್ನ್ ಟೆಕ್ಸ್ಟ್ (ರೋಮಯರ 2ರಿಂದ 4ರ ಶತಮಾನದವರೆಗೆ ಚಾಲನೆಯಲ್ಲಿದ್ದ ಗ್ರಂಥಗಳು) ಪೌಲನು ಸಾಯಂಕಾಲದಲ್ಲಿ ಅಲ್ಲಿಗೆ ಹೋಗಿದ್ದನು.

[51]ಯೂನಿಕೆಯ ಮನೆಯಲ್ಲಿ, ಪೌಲನು ರಾತ್ರಿಯನ್ನು ಕಳೆದಿರಬಹುದು ಎಂದು ಅಭಿಪ್ರಾಯವಿದೆ.